

ಕಲ್ಯಾಣ ಕಿರಣ

ಡಿಸಂಬರ್-2010


ಬೆಲೆ-10./-



ಪರಮದಾಸೋಹಿ ಕಲಬುರ್ಗಿಯ ಶರಣ ಬಸವೇಶ್ವರ



ಐತಿಹಾಸಿಕ ಕಿತ್ತೂರು ಕೋಟೆ ಆವರಣದಲ್ಲಿ ಇಷ್ಟಲಿಂಗ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಕಿತ್ತೂರು ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳು.



ಮೆಟ್ಯಾಲ ಗ್ರಾಮದ ಬಸವ ಮಂಟಪ ನಿರ್ಮಾಣಕ್ಕೆ 2ಗುಂಟೆ ಜಮೀನು ನೀಡಿದ ಶರಣ ದಂಪತಿಗಳಾದ ಈರಪ್ಪ ಅಸುಂಡಿ ದಂಪತಿಗಳನ್ನು ಸನ್ಮಾನಿಸುತ್ತಿರುವ ಜಗದ್ಗುರು ಗಂಗಾದೇವಿ ಮಾತಾಜಿ.



ಚೆನ್ನೈದಲ್ಲಿ ಗೃಹಪ್ರವೇಶ ನೆರವೇರಿಸಿದ ಪೂಜ್ಯ ಮಾತಾಜಿ ಮನೆಯ ಮಾಲಿಕರಾದ ಶ್ರೀಶೈಲ ಕಿತ್ತೂರು ದಂಪತಿಗಳನ್ನು ಆಶೀರ್ವದಿಸುತ್ತಿರುವುದು

ಸಂಪುಟ-40 ಸಂಚಿಕೆ-12

ಬಸವ ಶಕೆ -877 ಡಿಸೆಂಬರ್-2010

ಆಜೀವ ಸದಸ್ಯತ್ವ 1000 ರೂ. ವಾರ್ಷಿಕ ಚಂದಾ 100/- ರೂ.

ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು ॥ ಪ ॥

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ. ॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ 4 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು ॥ 6 ॥

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2011ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
2. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
3. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ನಾಲ್ಕನೆಯ

ಶರಣ ಮೇಳ

2011ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆ ಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ.ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾ ಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14,15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ನಾಲ್ಕನೆಯ ಶರಣ ಮೇಳವು 2011ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ,ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚು ಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರ

ರಾಜ್ಯಗಳಿಂದಲೂ ಶರಣ ಪ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ' ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.)ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ,ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ,. 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂ : 08351-268014/268007/268140

ಸಂಪಾದಕೀಯ :

- ಮಾತಾಜಿ

1. ಬಸವನ ಬಾಗೇವಾಡಿ ಬಸವ ಜನ್ಮ ಸ್ಮಾರಕ

ದಿ.27-10-2010, ಚನ್ನ(ಬುಧ)ವಾರ ಸಂಜೆ 5 ಗಂಟೆ ಸುಮಾರಿಗೆ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಕರ್ನಾಟಕ ಸರ್ಕಾರದ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾಗಿರುವ ಬಸವಣ್ಣನವರ ಜನ್ಮ ಸ್ಮಾರಕವನ್ನು ನೋಡಲು ನೋಡಲು ಹೋಗಿದ್ದೆವು. ನಮ್ಮ ಜೊತೆಗೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರೂ ಇದ್ದರು. ಶ್ರೀ ಜಾಮದಾರ್ ಅವರ ನೇತೃತ್ವದಲ್ಲಿ ಆದ ಸ್ಮಾರಕ ಬಸವನ ಬಾಗೇವಾಡಿಗೆ ಒಂದು ವಿಶೇಷ ಶೋಭೆಯನ್ನು ತಂದಿದೆ. ಸಂದರ್ಶನೀಯ ಸ್ಥಳವಾಗಿದೆ.

ಮುಖ್ಯ ಮಂದಿರದಲ್ಲಿ ತಾಯಿ ಮಾದಲಾಂಬಿಕೆಯ ತೊಡೆಯ ಮೇಲೆ ಇರುವ ಶಿಶು ಬಸವರಸ; ಕುರ್ಚಿಯ ಮೇಲೆ ಕುಳಿತು ಆಶೀರ್ವದಿಸುತ್ತಿರುವ ಜಾತವೇದ ಮುನಿಗಳು. ಎದುರಲ್ಲಿ ಕೈಮುಗಿದು ನಿಂತ ಮಾದರಸ. ಈ ದೃಶ್ಯವು ನಯನ ಮನೋಹರವಾಗಿದೆ. ಇದರ ಸುತ್ತಲೂ ಹಿಂಬದಿಯ ಗೋಡೆಯ ಮೇಲೆ ತೂಗು ಫಲಕಗಳಿವೆ. ಇದರಲ್ಲಿ ಕೆಲವು ಚಿತ್ರಣಗಳಿವೆ. ಫೈಬರಿನಲ್ಲಿ, ಕಟ್ಟಿಗೆಯಲ್ಲಿ, ಲೋಹದಲ್ಲಿ ಈ ಚಿತ್ರಗಳನ್ನು ನಿರ್ಮಿಸಲಾಗಿದೆ.

ಒಂದು ಕೊರತೆ ಎಂದರೆ ಬಾಲಕ ಬಸವರಸರು ಬಾಗೇವಾಡಿಯನ್ನು ಬಿಡುವವರೆಗಿನ ಘಟನೆ ಮಾತ್ರವಿವೆ. ಕೂಡಲ ಸಂಗಮದ್ದೂ ಒಂದೆರಡು ಚಿತ್ರಗಳಿವೆ. ಆದರೆ ಗುರು ಬಸವಣ್ಣನವರ ಸಂಪೂರ್ಣ ಜೀವನ ಚರಿತ್ರೆಯ ಚಿತ್ರಣವಿಲ್ಲದುದು ದೊಡ್ಡ ಕೊರತೆ. ನೋಡುವ ಜನರಿಗೆ ಅರ್ಧಂಬರ್ಧ ಎನಿಸುತ್ತದೆ. ಮತ್ತೊಂದು ದೋಷವೆಂದರೆ ಯಾವ ದಿನಾಂಕಗಳಾಗಲೀ, ಇಸವಿ ಗಳಾಗಲಿ ಕಾಣಿಸಲ್ಪಟ್ಟಿಲ್ಲ. ಗುರು ಬಸವಣ್ಣನವರು ಆಗಿ ಹೋಗಿ ಕೇವಲ 800 ವರ್ಷಗಳಾಗಿವೆಯಾದರೂ ಅವರ ಜನನ ಮತ್ತು ಲಿಂಗೈಕ್ಯ ದಿನಾಂಕಗಳನ್ನು ಗುರುತಿಸದಿರುವುದು ಬಹು ದೊಡ್ಡ ಐತಿಹಾಸಿಕ ಲೋಪ. ಬುದ್ಧ, ಮಹಾವೀರ, ಏಸು ಆಗಿಹೋಗಿ 2000 ವರ್ಷಆಗಿದ್ದರೂ ಅವರ ಜೀವನದ ಪ್ರಮುಖ ಘಟನೆಗಳ ದಿನಾಂಕಗಳನ್ನು ಆಯಾ ಧರ್ಮದವರು ಗುರುತಿಸಿಕೊಂಡಿದ್ದಾರೆ.

ಮತ್ತೊಂದು ಲೋಪವೆಂದರೆ ಸ್ವತಃ ಬಸವಣ್ಣನವರ ತಾಯಿತಂದೆಯರೇ ಮಗನನ್ನು ಕೂಡಲ ಸಂಗಮದ ಗುರುಕುಲಕ್ಕೆ ತಂದು ಬಿಟ್ಟರು ಎಂಬಂತೆ ಚಿತ್ರೀಕರಿಸುವುದು. ಇದರಿಂದ ಬಾಲಕ ಬಸವಣ್ಣನ ಕ್ರಾಂತಿಕಾರಿ ವಿಚಾರಧಾರೆಯನ್ನು ನಿಸ್ಸತ್ವಗೊಳಿಸಿರುವುದು. ಬಾಲಕ ಬಸವಣ್ಣನ ಕೊರಳಲ್ಲಿ ಇಷ್ಟಲಿಂಗವನ್ನು ಕಟ್ಟಿರುವುದು ಮತ್ತೊಂದು ಲೋಪ. ಜಾತವೇದರ ಕೊರಳಲ್ಲಿಯೇ ಇಷ್ಟಲಿಂಗವಿಲ್ಲ. ಅವರು ಪಾಶುಪತ ಶೈವ ಸಂಪ್ರದಾಯದವರು; ಅಂದಾಗ ಬಾಲಕನಿಗೆ ಹೇಗೆ ಬರಲು ಸಾಧ್ಯ? ಹೀಗೆ ಸ್ಮಾರಕದೊಳಗಣ ಚಿತ್ರಣ ಅಪರಿಪೂರ್ಣವಾಗಿವೆ.

ಸ್ಮಾರಕದ ಕೆಳಭಾಗದಲ್ಲಿ ಒಂದು ಸಭಾಭವನ ನಿರ್ಮಾಣ ಮಾಡಿರುವುದು ಅಭಿನಂದನೀಯ. ಶರಣ ಸಂಸ್ಕೃತಿಯ ಕಾರ್ಯಕ್ರಮಗಳನ್ನು ಮಾಡಲು ಒಂದು ಒಳ್ಳೆಯ ಸಭಾಂಗಣ ಇದರಿಂದ ದೊರೆತಿದೆ. ಇನ್ನೂ ಒಂದು ಅಭಿನಂದನಾರ್ಹ ಸಂಗತಿ ಎಂದರೆ ಈ ಸ್ಮಾರಕಕ್ಕೆ ಹೊಂದಿಕೊಂಡು ಒಂದು ಗ್ರಂಥಾಲಯ ಆಗಿರುವುದು. ಇದರಿಂದ ಸಾಹಿತ್ಯಾಕಾಂಕ್ಷಿಗಳಿಗೆ ಅಧ್ಯಯನ ಮಾಡಲು ಒಳ್ಳೆಯ ವಾತಾವರಣ ಒದಗಿದೆ. ಬಸವನ ಬಾಗೇವಾಡಿಗೆ ಬಂದವರಿಗೆ ಹಳೆಯ ದೇವಾಲಯದ ಜೊತೆ ಜನ್ಮಸ್ಥಳದ ಆಧುನಿಕ ಸ್ಮಾರಕವೂ ಸೇರಿರುವುದು ಸಂದರ್ಶನಕ್ಕೆ ಉತ್ಸಾಹ ಮೂಡಿಸುತ್ತದೆ.

ನೂತನ ವಿದ್ಯಾಲಯದ ವಿಜ್ಞಾನ ಶಿಕ್ಷಕರಾದ ಶರಣ. ಎಸ್.ಹೆಚ್.ಬಿರಾದಾರ್ ಅವರು ನಮ್ಮನ್ನು ಸ್ವಾಗತಿಸಿ ಫಲ, ಪುಷ್ಪ, ಕಾಣಿಕೆ ಇತ್ತು ಗೌರವಿಸಿದರು. ಸಾಹಿತಿಗಳಾದ ಶರಣ. ಲ.ರು.ಗೊಳಸಂಗಿ ಮತ್ತು ಸುರೇಶ್.ಎಂ.ಚಿಂಚೋಳಿಯವರು ಸ್ಮಾರಕದ ವಿವಿಧ ಭಾಗಗಳ ಪರಿಚಯ ಮಾಡಿಕೊಟ್ಟರು.

ಸ್ಮಾರಕದ ಸುತ್ತ ವಿಶಾಲವಾದ ಜಾಗವಿಲ್ಲ. ಅಲ್ಲಿಗೆ ಹೋಗುವ ರಸ್ತೆ ಅತ್ಯಂತ ಕಿರಿದಾದವು. ಮನೆ -ಬಸವಣ್ಣನವರು ಹುಟ್ಟಿದ ಮನೆ ಎಂದು ತಿಳಿದು ಸ್ವಾಧೀನ ಪಡಿಸಿಕೊಂಡು ಇಷ್ಟು ಕಿರಿದಾದ ಜಾಗದಲ್ಲಿ ಮಾಡುವ ಬದಲು ಹೆದ್ದಾರಿಗೆ ಸಮೀಪದಲ್ಲಿ ವಿಶಾಲವಾದ ಗಾರ್ಡನ್ ಮಾಡಲು ಅವಕಾಶವಿಟ್ಟುಕೊಂಡು ವಿಸ್ತಾರವಾದ ಜಾಗದಲ್ಲಿ ಮಾಡಿದ್ದರೆ ಹೆಚ್ಚಿನ ಶೋಭೆ ಸ್ಮಾರಕಕ್ಕೆ ಬರುತ್ತಿತ್ತೇನೋ!

2. ಶ್ರೀ ಯಡೆಯೂರಪ್ಪನವರು ಮತ್ತು ಮಠಾಧೀಶರ ಬೆಂಬಲ

ಇಂದಿನ ರಾಜಕೀಯ ದೊಂಬರಾಟ, ಜಿದ್ದಾಜಿದ್ದಿ, ಶಾಸಕರ ಮಾರಾಟ - ಖರೀದಿ ವ್ಯವಹಾರ, ರೆಸಾರ್ಟ್‌ಗಳಲ್ಲಿನ ಸುಖದ ಜೀವನ ಎಲ್ಲ ಕಂಡು ಮನನೊಂದು ಇಷ್ಟು ಕಲುಷಿತಗೊಂಡ ರಾಜಕೀಯದ ಬಗ್ಗೆ ಮಾತನಾಡುವುದು, ಹೇಳುವುದು, ಕೇಳುವುದು ಏನೂ ಬೇಡ ಎಂದು ತುಟಪಿಟಕ್ಕೆನ್ನದೆ ಮೌನವಾಗಿದ್ದೆ. ಶರಣ ಮೇಳ ಕುರಿತು ಪತ್ರಿಕಾಗೋಷ್ಠಿಯನ್ನು ಕೊಪ್ಪಳದಲ್ಲಿ ಶರಣ. ವೀರಣ್ಣ ಲಿಂಗಾಯತ್, ರಾಷ್ಟ್ರೀಯ ಬಸವ ದಳದ ಅಧ್ಯಕ್ಷರು ಕರೆದಿದ್ದರು. ದಿ. 27-11-2010ರಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ 2 ವಿಷಯ ಕುರಿತು ಲಿಖಿತರೂಪದಲ್ಲಿ ವಿವರ ನೀಡಿದ್ದೆ. "ಶರಣ ಮೇಳ "ಕುರಿತು ಮತ್ತು "ಮುಂಬರುವ ಜನಗಣತಿಯಲ್ಲಿ ಧರ್ಮ ಅಂಕಣದಲ್ಲಿ ಲಿಂಗಾಯತ" ಎಂದು ಬರೆಸುವ ಕುರಿತು.

ಆದರೆ ಪತ್ರಿಕಾ ಪ್ರತಿನಿಧಿಗಳು ಮತ್ತು ಟಿ.ವಿಯವರು ಕೆದಕಿ ಕೆದಕಿ ಪ್ರಶ್ನೆ ಕೇಳಲು ಆರಂಭಿಸಿದರು. " ಪ್ರಸ್ತುತ ರಾಜಕೀಯದ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದರು. ಮಹಾತ್ಮ ಗಾಂಧೀಜಿಯವರ ಬಳಿ 3 ಕೋತಿಗಳ ಗೊಂಬೆ ಇತ್ತಂತೆ. ಹಾಗೆ ನಾವೂ ಇಂದಿನ ರಾಜಕೀಯದ ಬಗ್ಗೆ ಕಣ್ಣು ಮುಚ್ಚಿಕೊಂಡು, ಕಿವಿ ಮುಚ್ಚಿಕೊಂಡು, ಬಾಯಿ ಮುಚ್ಚಿಕೊಂಡು ಕೂರಬೇಕಾಗಿದೆ. ಏಕೆಂದರೆ ಕೆಟ್ಟದ್ದನ್ನು ನೋಡಬಾರದು, ಕೇಳಬಾರದು, ಅದರ ಬಗ್ಗೆ ಮಾತನಾಡಬಾರದು." ಎಂದೆ.

"ನಿಮ್ಮಂತಹ ಪ್ರಜ್ಞಾವಂತರೇ ಹೀಗೆಂದರೆ ಹೇಗೆ?" ಪತ್ರಿಕೆಯವರ ಪ್ರಶ್ನೆ, "ಬದಲಾವಣೆ ಸಾಧ್ಯವಿಲ್ಲದಷ್ಟು ಕೆಟ್ಟಿದೆ. ಯಾರಾದರೂ ಮಹಾತ್ಮ ಗಾಂಧೀಜಿಯಂತಹವರು ಬಂದು ಎರಡನೆ ಸ್ವಾತಂತ್ರ್ಯ ಸಂಗ್ರಾಮ ಆರಂಭಿಸಿದರೆ ಏನಾದರೂ ಪರಿವರ್ತನೆ ಆದೀತೇನೋ? ಇನ್ನು ಉತ್ತಮ ಪರಿವರ್ತನೆ ಸಾಧ್ಯವಿಲ್ಲವೇನೋ ಎಂಬಷ್ಟು ನಿರಾಶೆ ಮೂಡಿದೆ."

"ಯಡೆಯೂರಪ್ಪನವರನ್ನು ತೆಗೆಯಬಾರದೆಂದು ಕೆಲವು ಮಠಾಧೀಶರು, ವೀರಶೈವ ಸಂಘಟನೆಗಳು ಬೀದಿಗಿಳಿದು ಹೋರಾಡಿದವಲ್ಲ, ಈ ಬಗ್ಗೆ ನಿಮ್ಮ ಅಭಿಪ್ರಾಯ."

"ಅದು ತಪ್ಪು, ಮಠಾಧೀಶರು ರಾಜಕೀಯದಿಂದ ಹೊರತಾಗಿರಬೇಕು. ಅವರಿಗೆ ಎಲ್ಲ ಪಕ್ಷದವರೂ ಬೇಕು, ಎಲ್ಲರೂ ಸಮಾನರು."

"ಯಡೆಯೂರಪ್ಪನವರು ಕೇವಲ ಲಿಂಗಾಯತರಿಗೆ ಸೀಮಿತರೆ?

"ಇಲ್ಲ ಎಲ್ಲರೂ ಆಯ್ಕೆ ಮಾಡಿದ್ದಾರೆ. ಹೀಗೆ ಯಡೆಯೂರಪ್ಪನವರ ಪರವಾಗಿ ಚಳುವಳಿ ಮಾಡಿ ಅವರನ್ನು ಒಂದೇ ಸಮಾಜಕ್ಕೆ ಸೀಮಿತಗೊಳಿಸುವ ಕೆಲಸವನ್ನು ಆ ಸಂಘಟನೆಗಳವರು

ಮಾಡಿದ್ದಾರೆ. ಹಿಂದೆ ರಾಜಗುರುಗಳು ರಾಜರಿಗೆ ತಪ್ಪಿದಾಗ ಬುದ್ಧಿ ಹೇಳುತ್ತಿದ್ದರು. ಈಗಿನ ಗುರುಗಳು ಮಂತ್ರಿಗಳ ಮುಂದೆ ಕೈಚಾಚಿ ನಿಲ್ಲುತ್ತಾರೆ. ಬುದ್ಧಿ ಹೇಳುವ ಆತ್ಮಬಲವನ್ನೇ ಕಳೆದು ಕೊಂಡಿದ್ದಾರೆ." ಎಂದು ಹೇಳಿದೆ.

"ಟಿ.ವಿ.ಸಂದರ್ಶನ ಒಂದರಲ್ಲಿ ಸಚಿವ ರೇಣುಕಾಚಾರ್ಯ ಮತ್ತು ಕೊಳದ ಮಠದ ಶ್ರೀಗಳು ಯಡೆಯೂರಪ್ಪನವರನ್ನು ಆಧುನಿಕ ಬಸವಣ್ಣ ಎಂದು ಹೊಗಳಿದ್ದಾರೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ."

"ನಾನು ಆ ಸಂದರ್ಶನ ನೋಡಲಿಲ್ಲ. ಬೆಂಗಳೂರಿನಿಂದ ಕೊಪ್ಪಳಕ್ಕೆ ಟ್ರೇನಿನಲ್ಲಿ ಬರುತ್ತಿದ್ದೆ. ಆಗ ಒಂದಿಬ್ಬರು ಮೊಬೈಲ್‌ಗೆ ಫೋನ್‌ಮಾಡಿ ಹೀಗೆ ಯಡೆಯೂರಪ್ಪನವರನ್ನು ಗುರು ಬಸವಣ್ಣನವರಿಗೆ ಹೋಲಿಸಿದ್ದು ತಿಳಿಸಿ, ಬೇಸರ ಪಟ್ಟರು. ನನಗೂ ಬಹಳ ನೋವಾಯಿತು. ಗುರು ಬಸವಣ್ಣನವರಿಗೆ ಹೋಲಿಕೆಯಾಗುವಂತಹ ಬೇರೊಬ್ಬ ವ್ಯಕ್ತಿ ಜಗತ್ತಿನಲ್ಲೇ ಇಲ್ಲ ಎಂದು ನಾವು ನಂಬಿ, ಗೌರವಿಸುವಾಗ ಹೀಗೆ ಮುಖ್ಯಮಂತ್ರಿಯೊಬ್ಬರಿಗೆ ಹೋಲಿಸುವುದು ಸರಿಯೆ? ಇದು ಅಪರಾಧ. ಇದರಿಂದ ನಮ್ಮ ಮನಸ್ಸಿಗೆ ತುಂಬಾ ನೋವಾಗಿದೆ." ಎಂದು ಸ್ಪಷ್ಟವಾಗಿ ಹೇಳಿದೆ.

ಈ ಎಲ್ಲ ವಿಷಯ ಕುರಿತು ಏನೇನೂ ಮಾತನಾಡಬಾರದೆಂದು ನಾವು ಸುಮ್ಮನಿದ್ದರೂ ಪತ್ರಿಕೆಗಳವರು ಸುಮ್ಮನಿರುವುದಿಲ್ಲ; ಕೆದರಿಯೇ ಬಿಡುತ್ತಾರೆ. ನಾವೋ ಅಂತರಾತ್ಮಕ್ಕೆ ವಿರುದ್ಧವಾಗಿ ಮಾತನಾಡುವವರಲ್ಲ. ಮತ್ತು ಯಾರ ಹಂಗಿನಲ್ಲೂ ಇಲ್ಲ.

ಹಾಸನದಿಂದ ಎಂದು ಹೇಳಿಕೊಂಡು ಯಾರೋ ಫೋನ್ ಮಾಡಿ, ನೀವು ಹೀಗೆ ಹೇಳಿಕೆ ಕೊಟ್ಟಿದ್ದೀರಲ್ಲ, ಇದು ಲಿಂಗಾಯತ ಸಮಾಜಕ್ಕೇ ಅವಮಾನ ಎಂದು ಆರ್ಭಟಿಸಿದರು. ಯಾವುದು ಅವಮಾನ? ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಎಂದು ಪ್ರಾಮಾಣಿಕತೆ ಮೆರೆದ ಗುರು ಬಸವಣ್ಣನವರಿಗೆ ಇಂದಿನ ಮುಖ್ಯಮಂತ್ರಿಗಳನ್ನು ಹೋಲಿಸುವುದು ಅವಮಾನಕರವಲ್ಲವೆ? "ಒಡೆಯರು ಬಂದರೆ ಗುಡಿ ತೋರಣ ಕಟ್ಟಿ, ನೆಂಟರಿಷ್ಟರು ಬಂದರೆ ಸಮಯವಿಲ್ಲೆನ್ನಿ ಎಂದು ನುಡಿದ ನಿಸ್ವಾರ್ಥಿ ಗುರು ಬಸವಣ್ಣನವರನ್ನು ಸ್ವಜನ ಪಕ್ಷಪಾತ, ಪುತ್ರಮೋಹಿ, ಬಂಧು ಮೋಹಿ ರಾಜಕಾರಣಗಳಿಗೆ ಹೋಲಿಸುವುದು ಅವಮಾನಕಾರವಲ್ಲವೆ? "ಆನೀ ಬಿಜ್ಜಳಂಗಂಜುವೆನೆ? ಊರಮುಂದೆ ಹಾಲ ಹಳ್ಳ ಹರಿಯುತ್ತಿರಲು ಓರೆಯಾವಿನ ಬೆನ್ನಲ್ಲಿ ಹರಿಯಲೇತಕ್ಕಯ್ಯ, ಲಜ್ಜೆಗೆಡಲೇಕೆ ನಾಣುಗೆಡಲೇಕೆ? ಎಮಗೆ ಲಿಂಗದೇವಯ್ಯನುಳ್ಳನ್ನಕ್ಕ ಬಿಜ್ಜಳನ ಭಂಡಾರವೇನ ಗೇಕಯ್ಯಾ" ಎಂದು ಗುರು ಬಸವಣ್ಣನವರನ್ನು ಮಿತಿಮೀರಿದ ಆಸ್ತಿ ಸಂಪಾದನೆಯಲ್ಲಿ ನಿರತರಾದವರಿಗೆ ಹೋಲಿಸುವುದು ಅವಮಾನಕರವಲ್ಲವೆ?

ಗುರು ಬಸವಣ್ಣನವರ ಪಥದಲ್ಲಿ ನಡೆಯಬೇಕಾದ ಲಿಂಗಾಯತ ಸಮಾಜ ಜಾತಿ ಮೋಹದಿಂದ ಭ್ರಷ್ಟಾಚಾರವನ್ನು, ಸ್ವಜನ ಪಕ್ಷಪಾತವನ್ನು ಬೆಂಬಲಿಸುತ್ತದೆ ಎಂಬುದು ಹೆಚ್ಚಿನ ಅವಮಾನಕಾರಕವಲ್ಲವೆ? ಫಲಾನುಭವಿಗಳಿರಬಹುದು ಎಂಬ ಅಪ್ರಖ್ಯಾತಿಗೆ ಒಳಗಾದ ವೀರಶೈವ ಮಠಾಧಿಪತಿಗಳು ಬಿಜೆಪಿಯ ಆಂತರಿಕ ವ್ಯವಹಾರದಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿ ಇಡೀ ಸಮಾಜಕ್ಕೆ ಅವಮಾನ ಮಾಡಿದ್ದಾರೆಂದರೆ ಉತ್ಪ್ರೇಕ್ಷೆಯಲ್ಲ. ಇದರಿಂದ ಶ್ರೀಯಡೆಯೂರಪ್ಪನವರಿಗೆ ಉಪಕಾರ ಮಾಡಿದರೆ? ಕೇವಲ ವೀರಶೈವರು ಮಾತ್ರ ಬೆಂಬಲಿಸಿದರು ಎಂಬ ಭಾವ ಹುಟ್ಟಿಸಿ, ಯಡೆಯೂರಪ್ಪ ಕೇವಲ ವೀರಶೈವ ನೇತಾರ ಎಂಬ ಸಂಕುಚಿತ ಚೌಕಟ್ಟನ್ನು ಅವರಿಗೆ ಹಾಕಿದಂತಾಗಲಿಲ್ಲವೆ?

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2011 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ನಾಲ್ಕನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ನಿಮ್ಮ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2011ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 24ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಈಗ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2011 ನೆಯ ಇಸವಿಯ 24ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
10-10-2010

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
34.	04-12-2010	ಶರಣ(ಶನಿ)ವಾರ	ಕಿತ್ತೂರು
35.	05-12-2010	ದೇವ(ಭಾನು)ವಾರ	ಅವರಾದಿ
36.	06-12-2010	ಶಿವ(ಸೋಮ)ವಾರ	ಬೈಲಹೊಂಗಲ
37.	07-12-2010	ಬಸವ(ಮಂಗಳ)ವಾರ	,,
38.	08-12-2010	ಚನ್ನ(ಬುಧ)ವಾರ	ಬೆಳಗಾವಿ
39.	09-12-2010	ಪ್ರಭು(ಗುರು)ವಾರ	,,
40.	10-12-2010	ಮಾತೃ(ಶುಕ್ರ)ವಾರ	ಸಂಕೇಶ್ವರ
41.	11-12-2010	ಶರಣ(ಶನಿ)ವಾರ	ಗಡಿಹಿಂಗ್ಲಾಜ್
42.	12-12-2010	ದೇವ(ರವಿ)ವಾರ	ಗೋಕಾಕ್
43.	13-12-2010	ಶಿವ(ಸೋಮ)ವಾರ	,,
44.	14-12-2010	ಬಸವ(ಮಂಗಳ)ವಾರ	,,
45.	15-12-2010	ಚನ್ನ(ಬುಧ)ವಾರ	,,
46.	16-12-2010	ಪ್ರಭು(ಗುರು)ವಾರ	ಶೇಗುಣಸಿ
47.	17-12-2010	ಮಾತೃ(ಶುಕ್ರ)ವಾರ	ಖಿವಟಕೊಪ್ಪ
48.	18-12-2010	ಶರಣ(ಶನಿ)ವಾರ	ತಾಂವಶಿ
49.	19-12-2010	ದೇವ(ಭಾನು)ವಾರ	ಅಥಣಿ
50.	20-12-2010	ಶಿವ(ಸೋಮ)ವಾರ	ಜತ್ತ
51.	21-12-2010	ಬಸವ(ಮಂಗಳ)ವಾರ	ಅಡಹಳಹಟ್ಟಿ
52.	22-12-2010	ಚನ್ನ(ಬುಧ)ವಾರ	ಕನಮಡಿ
53.	23-12-2010	ಪ್ರಭು(ಗುರು)ವಾರ	ಚಡಚಣ
54.	24-12-2010	ಮಾತೃ(ಶುಕ್ರ)ವಾರ	ಬಿಜಾಪುರ
55.	25-12-2010	ಶರಣ(ಶನಿ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)
56.	26-12-2009	ದೇವ(ಭಾನು)ವಾರ	ಗುಲಬರ್ಗಾ(ಬ.ಮಂಟಪ ಮಹಾಂತನಗರ)
57.	27-12-2009	ಶಿವ (ಸೋಮ)ವಾರ	ಯಲಮಾಮಿಡಿ
58.	28-12-2009	ಬಸವ(ಮಂಗಳ)ವಾರ	ಉದಗೀರ
59.	29-12-2009	ಚನ್ನ(ಬುಧ)ವಾರ	ಬೀದರ
60.	30-12-2010	ಪ್ರಭು(ಗುರು)ವಾರ	ಕೋಳಾರ(ಕೆ)
61.	31-12-2010	ಮಾತೃ(ಶುಕ್ರ)ವಾರ	ಜಹಿರಾಬಾದ್
62.	01-01-2011	ಶರಣ(ಶನಿ)ವಾರ	ಹೈದ್ರಾಬಾದ್
63.	02-01-2011	ದೇವ(ರವಿ)ವಾರ	,,
64.	03-01-2011	ಶಿವ(ಸೋಮ)ವಾರ	,,
65.	04-01-2011	ಬಸವ(ಮಂಗಳ)ವಾರ	,,
66.	05-01-2011	ಚನ್ನ(ಬುಧ)ವಾರ	,,
67.	06-01-2011	ಪ್ರಭು(ಗುರು)ವಾರ	,,
70.	07-01-2011	ಮಾತೃ(ಶುಕ್ರ)ವಾರ	,,
71.	08-01-2011	ಶರಣ(ಶನಿ)ವಾರ	,,
72.	09-01-2011	ದೇವ(ಭಾನು)ವಾರ	,,
73.	10-01-2011	ಶಿವ(ಸೋಮ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ಭಾಗ-30 - ಮಾತಾಜಿ

ಬಸವ ವಚನಾಮೃತ

533. ವಿಶ್ವಾತ್ಮ ದೇವ

ಎತ್ತೆತ್ತ ನೋಡಿದೊಡತ್ತತ್ತ ನೀನೇ ದೇವಾ,
ಸಕಲ ವಿಸ್ತಾರದ ರೂಹು ನೀನೆ ದೇವಾ,
'ವಿಶ್ವತಃಚಕ್ಷು'ನೀನೆ ದೇವಾ,
'ವಿಶ್ವತೋಮುಖ' ನೀನೆ ದೇವಾ,
'ವಿಶ್ವತೋ ಬಾಹು' ನೀನೆ ದೇವಾ,
'ವಿಶ್ವತಃಪಾದ ನೀನೆ, ದೇವಾ, ಲಿಂಗದೇವಾ. - ಬ.ವ.ದೀ. 531

ಪರಮಾತ್ಮನ ಸ್ವರೂಪವನ್ನು ಸುಂದರವಾಗಿ ಮತ್ತು ಸಮಗ್ರವಾಗಿ ಚಿತ್ರಿಸುವ ವಚನವಿದು. ಎತ್ತೆತ್ತ ನೋಡಿದರೂ ಅಲ್ಲೆಲ್ಲ ನೀನು ಇದ್ದೀಯೆ ದೇವಾ. ವಿಸ್ತಾರವಾಗಿ ಹರಡಿಕೊಂಡಿರುವ ಬ್ರಹ್ಮಾಂಡದಲ್ಲೆಲ್ಲ ವ್ಯಾಪಿಸಿದ್ದೀಯ. ವಿಶ್ವದ ಎಲ್ಲೆಡೆ ನಿನ್ನ ಕಣ್ಣುಗಳು ಹರಡಿವೆ (ಅಂದರೆ ನೀನು ಸಕಲ ದ್ರಷ್ಟಾರನಾಗಿದ್ದೀಯೆ). ವಿಶ್ವದ ಎಲ್ಲೆಡೆ ನಿನ್ನ ಮುಖವು ವ್ಯಾಪಿಸಿದೆ. ವಿಶ್ವದ ಎಲ್ಲೆಡೆ ನಿನ್ನ ಬಾಹುಗಳು ಹರಡಿವೆ. (ನೀನು ಸರ್ವಶಕ್ತನಾಗಿದ್ದೀಯೆ), ವಿಶ್ವದ ಎಲ್ಲೆಡೆ ನಿನ್ನ ಪಾದಗಳು ಹರಡಿವೆ. (ನೀನು ಸರ್ವವ್ಯಾಪಿಯಾಗಿದ್ದೀಯೆ) ಲಿಂಗದೇವನೆ.

534. ದೇವನ ಸಂಕಲ್ಪದಿಂದ ಜಗತ್ತು

ಜಲಕೂರ್ಮ ನಾಗ ಮೇದಿನಿ ಸಪ್ತಸಾಗರ
ಅಜಾಂಡಕಾಂಡ ಹರಿವಿರಂಚಿಗಳು
ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯಾ
ಲಿಂಗದೇವನ ಮಹಾಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ
ಇಚ್ಛಾಮಾತ್ರದಿಂದ ಜಗಜುಗವಯ್ಯಾ! - ಬ.ವ.ದೀ. 532

ನೀರು, ಆಮೆ (ಪೃಥ್ವಿ ಮುಳುಗಿದಾಗ ಅದನ್ನು ಎತ್ತಿತು ಎಂಬ ಪೌರಾಣಿಕ ಕಥೆ ಇದೆ) ಭೂಮಿಯನ್ನು ಹೊತ್ತಿರುವ ನಾಗ, ಭೂಮಿ, ಅದನ್ನು ಸುತ್ತುವರಿದಿರುವ ಸಪ್ತಸಾಗರ, ಬ್ರಹ್ಮಾಂಡ, ಹರಿ ಬ್ರಹ್ಮ- ಇವರೆಲ್ಲರು ಸೃಷ್ಟಿಕರ್ತನಾದ ದೇವನೆ ನಿನ್ನ ಉದರದ ತುದಿಯಲ್ಲಿರುವ ಪ್ರಾಣಿಗಳು. ಪರಮಾತ್ಮ ಲಿಂಗದೇವನ ಮಹಾಮನೆಯಲ್ಲಿ ದೇವನ ಅಧೀನ ಶಕ್ತಿಯಾದ ಅಸ್ತಿಗ್ರಾಹಕನೆಂಬ ಗಣೇಶ್ವರನ ಇಚ್ಛಾಮಾತ್ರ (will) ದಿಂದ ಜಗತ್ತು ನಿರ್ಮಾಣವಾಗಿದೆ, ಯುಗಗಳೂ ನಿರ್ಮಾಣವಾಗಿವೆ.

535.ದೇವನ ವಿರಾಟ್‌ರೂಪ

ರುದ್ರ ಮುಖದಲ್ಲಿ ವಿಷ್ಣು ಭುಜದಲ್ಲಿ,
ಜಂಘೆಯಲ್ಲಿ ಅಜನ ಜನನವು
ಇಂದ್ರ, ಪಾದದಲ್ಲಿ ಚಂದ್ರ ಮುಖದಲ್ಲಿ,
ಚಕ್ಷುವಿನಲ್ಲಿ ಸೂರ್ಯನ ಜನನವು
ನೊಸಲಲ್ಲಿ ಅಗ್ನಿಯು ಪ್ರಾಣದಲ್ಲಿ ವಾಯು

ನಾಭಿಯಲ್ಲಿ ಅಂತರಿಕ್ಷವು,
ಸಿರದಲುದಯ ತೆತ್ತೀಸಕೋಟಿ ದೇವತೆಗಳು.
ಪಾದತಳದಲ್ಲಿ ಭೂಮಿ ಜನನವು,
ಶ್ರೋತ್ರದಲ್ಲಿ ದಶದಿಕ್ಕುಗಳು,
ಜಗವ ನಿಕ್ಷೇಪಿಸುವ ಕುಕ್ಷಿಯಲ್ಲಿ, ಅಕ್ಷಯನಗಣಿತನು,
ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ,
ಸಾಸಿರ ಸನ್ನಿಹಿತ ನಮ್ಮ ಲಿಂಗದೇವ. - ಬ.ವ.ದೀ. 533

ಪರಮಾತ್ಮನು ವಿರಾಟ್‌ರೂಪಿ, ದೇವಾದಿದೇವತೆಗಳೆಲ್ಲ ಅವನ ಅಂಗಾಂಗಗಳು. ಪರಮಾತ್ಮನ ಮುಖದಿಂದ ರುದ್ರ (ಶಿವ)ನ ಉತ್ಪತ್ತಿ, ಭುಜದಿಂದ ವಿಷ್ಣುವಿನ ಉತ್ಪತ್ತಿ, ಜಂಘೆ (ತೊಡೆ)ಯಲ್ಲಿ ಬ್ರಹ್ಮನ ಉತ್ಪತ್ತಿ. ದೇವನ ಪಾದದಲ್ಲಿ ಇಂದ್ರ, ಮನದಲ್ಲಿ ಚಂದ್ರ, ಕಣ್ಣುಗಳಿಂದ ಸೂರ್ಯನ ಜನನ. ಹಣೆ (ಕಣ್ಣೆ)ಯಿಂದ ಅಗ್ನಿ, ದೇವನ ಪ್ರಾಣ ದಿಂದ ವಾಯುವು, ಹೊಕ್ಕಳಿನಿಂದ ಅಂತರಿಕ್ಷದ ಉತ್ಪತ್ತಿ ತಲೆಯಿಂದ ಉದಯ 33 ಕೋಟಿ ದೇವತೆಗಳು. ಪಾದದ ಕೆಳಭಾಗದಿಂದ ಭೂಮಿಯು, ಕಿವಿಯಲ್ಲಿ ಹತ್ತು ದಿಕ್ಕುಗಳು. ದೇವನ ಕಣ್ಣಾಲಿಗಳಲ್ಲಿ ಇಡೀ ಜಗತ್ತು ಹುದುಗಿದೆ. ಪರಮಾತ್ಮನು ಅಕ್ಷಯ ಅಂದರೆ ನಾಶ, ಕ್ಷಯ ಇಲ್ಲದವನು; ಅಗಣಿತನು - ಎಣಿಕೆಗೆ ಬಾರದವನು. ದೇವನಿಗೆ ಸಾವಿರ ಸಾವಿರ ತಲೆ, ಸಾವಿರ ಸಾವಿರ ಕಣ್ಣು, ಸಾವಿರ ಸಾವಿರ ಕೈಗಳು, ಸಾವಿರ ಸಾವಿರ ಪಾದಗಳು. ಹೀಗೆ ಲಿಂಗದೇವನು ವಿರಾಟರೂಪಿ.

536. ರುದ್ರನೇ ಅಧಿಕನು

ವಿಶ್ವಾಧಿಕೋ ರುದ್ರನ ಹೊಗಳುವ ಶ್ರುತಿಗಳು
ವಿಶ್ವರೂಪಾಯ ವೈ ನಮಃ
ಪರಮರೂಪನೆ ನಮೋ, ಪರತತ್ವನೆ ನಮೋ,
ಆದಿಯಾರೂಢಭಯಕರನೆ ನಮೋ
ಹರಿಯನು ಹರಿಸಿದನೇ ಎಂದು ಶ್ರುತಿಯು ಸಾರುತ್ತಿರಲು-
ಸಂಹಾರ ಕಾರಣನೆ ನಮೋ, ನಮ್ಮ ಕೂಡಲ ಸಂಗಮದೇವಾ,
ಮಹದ್ ಮಹದ್ಭ್ಯೋ ನಮಃ - ಬ.ವ.ದೀ. 534

ವಿಶ್ವದಲ್ಲಿಯೇ ಅಧಿಕನಾದ ರುದ್ರನನ್ನು ಹೊಗಳುವ ಶ್ರುತಿಗಳು, ವಿಶ್ವ ರೂಪನೇ ನಮಃ, ಪರಮ ರೂಪನೇ ನಮಃ, ಪರತತ್ವನೇ ನಮಃ, ಎಲ್ಲಕ್ಕೂ ಆದಿಯು, ಆರೂಢನು, ಅಭಯಕರನೂ ಆದವನೇ ನಮಃ, ಹರಿಯನ್ನು ಅನುಗ್ರಹಿಸಿದವನೇ ನಮಃ ಎಂದು ಸ್ತುತಿಸುತ್ತವೆ. ಇಂತಹ ರುದ್ರನು ಸೃಷ್ಟಿಯ ಲಯಕ್ಕೆ ಕಾರಣನು, ಮಹತ್ತಿನಲ್ಲಿಯೇ ಮಹತ್ತಾದವನು. ಈ ವಚನದ ಭಾವದಲ್ಲಿ ತ್ರಿಮೂರ್ತಿಗಳಲ್ಲಿ ಒಬ್ಬನಾದ ರುದ್ರನು ಸಂಹಾರ ಕರ್ತನು ಎಂದು ಹೇಳಲಾಗಿದೆ.

537. ಶಿವನೇ ಶ್ರೇಷ್ಠನು

ಐದುವುದೇ ಬ್ರಹ್ಮನ ಕಪಾಲ ಕರದಲ್ಲಿ?
ಐದುವುದೆ ವಿಷ್ಣುವಿನ ನಯನ ಪಾಥದಲ್ಲಿ?

ಐದುವುದೆ ಕಾಮನ ಸುಟ್ಟ ಭಸ್ಮ ಮೈಯಲ್ಲಿ?
ಮುಖ ಮೂದಲೆಯೇಕಯ್ಯಾ? ಕೂಡಲ ಸಂಗಮದೇವಾ!

– ಬ.ವ.ದೀ. 535

ಏಕದೇವತಾ (ಶಿವ) ಉಪಾಸಕರಾಗಿದ್ದಾಗ ಗುರು ಬಸವಣ್ಣನವರು ಬರೆದ ಈ ವಚನದಲ್ಲಿ ಶಿವನ ಆಧಿಕ್ಯವನ್ನು ಹೇಳಲಾಗಿದೆ. ಅಹಂಕಾರದಿಂದ ಬೀಗುತ್ತಿದ್ದ ಬ್ರಹ್ಮನ ತಲೆಯನ್ನು ಚಿವುಟಿ, ಅದೇ ಕಪಾಲ(ತಲೆಬರುಡೆ) ವನ್ನು ಭಿಕ್ಷಾಪಾತ್ರೆಯನ್ನಾಗಿ ಮಾಡಿಕೊಂಡು ಶಿವನು ಬೇಡಿದನಲ್ಲವೆ? ಒಮ್ಮೆ ವಿಷ್ಣು (ಕೃಷ್ಣ)ವು ಸಾವಿರ ಕಮಲ ಗಳಿಂದ ಶಿವನ ಅರ್ಚನೆ ಮಾಡುತ್ತಿದ್ದ. ಆತನ ಭಕ್ತಿಯನ್ನು ಪರೀಕ್ಷಿಸಲು ಶಿವನು ಒಂದು ಹೂವನ್ನು ಮಾಯ ಮಾಡಿದ. ಆಗ ನೇಮಕ್ಕೆ ಭಂಗಬರಬಾರದೆಂದು ಕೃಷ್ಣನು ತನ್ನ ಕಣ್ಣುಗಳನ್ನೇ ಶಿವನ ಪಾದಕ್ಕೆ ಅರ್ಪಿಸಿದನು. ಹೀಗಾಗಿ ಶಿವನ ಪಾದದ ಮೇಲೆ ವಿಷ್ಣುವಿನ ನಯನಗಳಿವೆ. ಕಾಮನನ್ನು ಸುಟ್ಟ ಭಸ್ಮವನ್ನು ಶಿವನು ಮೈಗೆಲ್ಲ ಪೂಸಿ ಕೊಂಡಿದ್ದಾನೆ. ಹೀಗೆ ಶಿವನ ಮಹಿಮೆ ಸ್ಪಷ್ಟವಾಗಿರುವಾಗ ಇನ್ನಿತರ ದೇವತೆಗಳ ಸಲುವಾಗಿ ಅವರು ಶ್ರೇಷ್ಠರೆಂದು ಜಟಾಪಟಿ ಮಾಡಿಕೊಂಡು, ಕಾದಾಡುವುದೇಕೆ?

538. ದೇವರು ಪ್ರಳಯಾತೀತ

ಹರನ ಕೊರಳಲಿಪ್ಪ ಕರೋಟಿಮಾಲೆಯ
ಶಿರದ ಲಿಖಿತವ ಕಂಡು ಮರುಳು ತಂಡಗಳು ಓದಿ ನೋಡಲು
ಇವನಜ ಇವ ಹರಿ ಇವ ಸುರಪತಿ ಇವ ಧರಣೇಂದ್ರ
ಇವನಂತಕನೆಂದು ಹರುಷದಿಂದ ಸರಸವಾಡಿತ್ತ ಕಂಡು
ಹರ ಮುಕುಳಿತನಾಗಿ ನಕ್ಕ ನಮ್ಮ ಲಿಂಗದೇವ. – ಬ.ವ.ದೀ. 532

ಲಯ ಕರ್ತನಾದ ಹರನ ಕೊರಳಿನಲ್ಲಿ ಅಸಂಖ್ಯಾತ ತಲೆ ಬುರುಡೆಗಳ ಮಾಲೆ ಇದೆ. ಅವುಗಳ ಹಣೆಯ ಮೇಲೆ ಇವನು ಬ್ರಹ್ಮ, ಇವನು ಹರಿ, ಇವನು ಸುರಪತಿಯಾದ ಇಂದ್ರ, ಇವನು ಭೂಮಿಯನ್ನು ಆಳಿದ ಚಕ್ರಮರ್ತಿ, ಇವನು ಯಮ ಎಂದೆಲ್ಲ ಬರೆಯಲಾಗಿದೆ. ಶಿವನ ಸೇವಕರಾದ ಭೂತಗಣಗಳು ಆ ತಲೆ ಬುರುಡೆಗಳ ಮೇಲಿನ ಬರಹ ನೋಡಿ, ಓದಿ ಆಟವಾಡುತ್ತಲಿವೆ. ಅವುಗಳ ಆಟ ನೋಡಿ ಪ್ರಳಯಾತೀತನಾದ ಹರನು ಅತೀತನಾಗಿ ಮುಗುಳ್ನಗುತ್ತಿದ್ದಾನೆ.

ಬ್ರಹ್ಮನ ಒಂದು ತಲೆ ಸೃಷ್ಟಿ ಒಂದು ಬಾರಿ ಆದುದಕ್ಕೆ ಲೆಕ್ಕ; ಹರಿಯ ತಲೆ ಸೃಷ್ಟಿ ನಡೆದುದುಕ್ಕೆ ಲೆಕ್ಕ. ಹೀಗೆ ಸೃಷ್ಟಿಯು ಹಲವಾರು ಬಾರಿ ಆಗಿದೆ. ದೇವನು ಮಾತ್ರ ಈ ಸೃಷ್ಟಿ-ಸ್ಥಿತಿ-ಲಯಗಳೆಂಬ ಕ್ರಿಯೆಗೆ ಹೊರಗಾಗಿದ್ದಾನೆ ಎಂಬುದು ಈ ವಚನದ ಅಂತರಾರ್ಥ. ಆದರೆ ಬ್ರಹ್ಮ, ವಿಷ್ಣು, ಇಂದ್ರ, ಯಮ ಮುಂತಾದವರು ಆದಾಗ ಒಂದು ಆವರ್ತವು ಪೂರ್ಣಗೊಳ್ಳಬೇಕಾದರೆ ತ್ರಿಮೂರ್ತಿಗಳಲ್ಲಿ ಒಬ್ಬನಾದ ಲಯ ಕರ್ತನಾದ ರುದ್ರನೂ ರಂಗ ಪ್ರವೇಶ ಮಾಡಬೇಕಲ್ಲವೆ? ಅದನ್ನಿಲ್ಲಿ ಪ್ರಸ್ತಾಪಿಸದೆ ಬಸವಣ್ಣನವರು ಹರನನ್ನು ಅತೀತನಾಗಿ ವರ್ಣಿಸಿದ್ದಾರೆ. ಆದ್ದರಿಂದ ಈ ವಚನವು ಏಕದೇವತೋಪಾಶಕರಾಗಿದ್ದಾಗ ಬರೆದ ವಚನ ಎನಿಸುತ್ತದೆ. ಆದರೆ ನಂತರ ಬ್ರಹ್ಮ -ವಿಷ್ಣು -ರುದ್ರನಿಗೆ ಅತೀತನಾಗಿ ಲಿಂಗದೇವನಿದ್ದಾನೆ ಎಂಬುದನ್ನು ಅವರು ಮನಗಂಡಿದ್ದಾರೆ, ಬೋಧಿಸಿದ್ದಾರೆ.

539. ಪ್ರಳಯದ ಕರ್ತೃವೂ ದೇವನೆ

ಅದುರಿತು ಪಾದಾಘಾತದಿಂದ ಧರೆ,
ಬಿದಿರಿದುವು ಮುಕುಟ ತಾಗಿ ತಾರಕೆಗಳೆಲ್ಲಾ!
ಮಹೀಪಾದಾಘಾತಾದ್ ವ್ರಜತಿ ಸಹಸಾ ಸಂಶಯ ಪದಂ!
ಪದಂ ವಿಷ್ಣೋರ್ಭ್ರಾಮ್ಯದ್ ಭುಜಪರಿಘರುಗ್ಣಗ್ರಹಗಣಃ
ಮುಹುರ್ ದೌರ್ದಾಸ್ಥ್ಯಂಯಾತ್ಯ ನಿಭೃತಜಟಾತಾಡಿತತಟಾ!
ಜಗದ್ರಕ್ಷಾಯೈ ತ್ವಂ ನಟಿಸಿ ನನು ವಾಮ್ಯೈವ ವಿಭುತಾ॥
ನಮ್ಮ ಲಿಂಗದೇವನಂದು ನಾಟ್ಯವನಾಡೆ. – ಬ.ವ.ದೀ. 537

ಪರಮಾತ್ಮನ ಲೀಲಾನಾಟ್ಯವು ಸೃಷ್ಟಿಗೂ ಕಾರಣ ಮತ್ತು ಲಯಕ್ಕೂ ಕಾರಣ. ಮೊದಲಿನದು ಮಂಗಲಮಯ ಸುಂದರ ಮಧುರ ನಾಟ್ಯ. ಅದರಿಂದ ಸೃಷ್ಟಿಗೆ ಚಾಲನೆ. 'ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯನೆಂಬ ವಾಹನವಾಗಿರ್ದೆ.' ಎಂದು ಬಸವಣ್ಣ ನವರು ಹೇಳುತ್ತಾರೆ. ದೇವರು ಸೃಷ್ಟಿಯನ್ನು ಮಾಡಲು ಸಿದ್ಧನಾದಾಗ ಅವನಲ್ಲಿ ಅಂತರ್ಗತವಾದ ಶಕ್ತಿಯು ಚೈತನ್ಯ ರೂಪದಲ್ಲಿ ಪ್ರಕಟವಾಗುತ್ತದೆ. ಸೃಷ್ಟಿಯು ಲಯವಾಗುವಾಗ ರುದ್ರ ಭಯಂಕರ ನಾಟ್ಯವು ನಿಸರ್ಗದಲ್ಲಿ ಆರಂಭವಾಗುತ್ತದೆ. ಇದನ್ನೇ ಪ್ರಸ್ತುತ ವಚನದಲ್ಲಿ ಬಣ್ಣಿಸಲಾಗಿದೆ.

ಪರಮಾತ್ಮನು ರುದ್ರ ಭಯಂಕರ ನಾಟ್ಯವನ್ನು ಮಾಡಲಾರಂಭಿಸಿದಾಗ ಅವನ ಪಾದಾಘಾತದಿಂದ ಧರೆಯು ನಡುಗಲಾರಂಭಿಸುತ್ತದೆ. ಭೂ ಕಂಪವಾಗುತ್ತದೆ, ಅಗ್ನಿ, ಸ್ಫೋಟ, ಮೇಘ ಸ್ಫೋಟವಾಗಿ ವಿಚಿತ್ರವಾಗಿ ಮಳೆಯಾಗುತ್ತದೆ; ನದಿಗಳಲ್ಲಿ ಪ್ರವಾಹ ಉಕ್ಕುತ್ತದೆ. ಕೈಗಳು ತಾಕಿ ವಿವಿಧ ಗ್ರಹಗಳು, ಲೋಕಗಳು ಸಮತೋಲ ತಪ್ಪಿ ಬೀಳುತ್ತವೆ. ದೇವರು ಪ್ರಳಯನಾಟ್ಯವನ್ನು ಮಾಡಿದಾಗ ಸೃಷ್ಟಿಯು ರೂಪವನ್ನು ಕಳೆದುಕೊಂಡು ಲಯವಾಗುತ್ತದೆ.

(ಈ ವರ್ಷದಲ್ಲಿ ಜಗತ್ತಿನಾದ್ಯಂತ ಬಿದ್ದ ಮಳೆ, ಉಂಟಾದ ಪ್ರವಾಹ ಮುಂತಾದ್ದನ್ನು ನೋಡಿದಾಗ ಗುರು ಬಸವಣ್ಣನವರ ವಿವರಣೆ ಸತ್ಯವೇನೋ ಎನ್ನಿಸುತ್ತದೆ.)

ಇಲ್ಲಿ ಪಾದ, ಕಿರೀಟ, ಹಸ್ತ ಮುಂತಾಗಿ ಹೇಳಿದ್ದರೂ ಅವನ್ನೆಲ್ಲ ಸಾಂಕೇತಿಕ ಎಂದು ತಿಳಿದುಕೊಳ್ಳಬೇಕು; ಇದು ನಿರಾಕಾರ ದೇವನಿಗೆ ಅನ್ವಯವಾಗುತ್ತದೆಂದು ತಿಳಿಯಬೇಕು.

540. ದೇವರು ಸೃಷ್ಟಿ-ಸ್ಥಿತಿ-ಲಯಕ್ಕತೀತ

ಆರು ಕೋಟಿ ಬ್ರಹ್ಮರು ಮಡಿವಲ್ಲಿ
ನಾರಾಯಣನಿಗೊಂದು ದಿನವಾಯಿತ್ತು,
ನಾರಾಯಣರೊಂದು ಕೋಟಿ ಮಡಿವಲ್ಲಿ
ರುದ್ರನ ಕಣ್ಣೆವೆ ಹಳಚಿತ್ತು.
ರುದ್ರಾವತಾರ ಹಲವಳಿವಲ್ಲಿ
ಲಿಂಗದೇವನೇನೆಂದೂ ಅರಿಯ. – ಬ.ವ.ದೀ. 538

ನಾವೀಗ ಇರುವ ಸೃಷ್ಟಿಯೇ ಮೊದಲಿನದಲ್ಲ; ಕಡೆಯದೂ ಅಲ್ಲ. ಎಷ್ಟೋ ಬಾರಿ ಸೃಷ್ಟಿ - ಸ್ಥಿತಿ-ಲಯ ಕ್ರಿಯೆಗಳು ಜರುಗಿವೆ. ಆರು ಕೋಟಿ ಬ್ರಹ್ಮರು ಆಗಿ ಹೋದಾಗ

ನಾರಾಯಣನಿಗೆ ಒಂದು ದಿನವದು. ಒಂದು ಕೋಟಿ ನಾರಾಯಣರು ಆಗಿ ಹೋದಾಗ ರುದ್ರನ ಕಣ್ಣು ರೆಪ್ಪೆ ಬಡಿದಂತೆ. ಅಂಥ ರುದ್ರರು ಎಷ್ಟೋ ಜನ ಆಗಿ ಹೋದರೂ ಸೃಷ್ಟಿಕರ್ತ ಲಿಂಗದೇವನಿಗೆ ಅದು ಕಿಂಚಿತ್ ಸಮಯ. ಅವನಿಗೆ ಏನೂ ಘಟಿಸಿಲ್ಲ ಎಂಬ ಭಾವ.

ಈ ವಚನದ ಅಂತರಾರ್ಥವೇನೆಂದರೆ ಬ್ರಹ್ಮ-ವಿಷ್ಣು-ರುದ್ರ ಎಂಬುವವರನ್ನೂ ಮೀರಿದ ಚೇತನ ಸೃಷ್ಟಿಕರ್ತನಾದ ಲಿಂಗದೇವ.

541. ಹಲವು ದೈವಂಗಳು ಮಿಥ್ಯೆ.

ಯುಗ ಜುಗ ಪ್ರಳಯವಹಂದೂ ಕಾಣೆನಿಂದೂ ಕಾಣೆ!
ಧಗಿಲು ಭುಗಿಲೆಂದುರಿವಂದೂ ಕಾಣೆನಿಂದೂ ಕಾಣೆ!
ಲಿಂಗದೇವನಲ್ಲದೆ ತಲೆದೋರುವ
ದೈವಂಗಳನಂದೂ ಕಾಣೆನಿಂದೂ ಕಾಣೆ. - ಬ.ವ.ದೀ. 539

ಸೃಷ್ಟಿಯಾಗಿ ಯುಗಗಳು ನಡೆಯುವಾಗ, ಜುಗ ಅಂದರೆ ನಾಲ್ಕು ಯುಗಗಳು ಹದಿನೆಂಟು ಬಾರಿ ಸುತ್ತಿ ತಿರುಗಿ ಬರುವಾಗ, ಪ್ರಳಯವಾಗುವಾಗ ಯಾವ ದೈವಂಗಳನ್ನೂ ಕಾಣಲಾರೆವು. ಏಕೆಂದರವು ಮಾನವ ಕಲ್ಪಿತವಾದುವು. ಪ್ರಳಯಕಾಲದಲ್ಲಿ ಅಗ್ನಿ ಸ್ಫೋಟವಾಗಿ ಭೂಮಿಯು ಧಗಿಲು ಭುಗಿಲು ಎಂದು ಉರಿಯುವಾಗ ಯಾವ ದೈವಂಗಳನ್ನೂ ಕಾಣೆವು. ಆಗ ಉಳಿವವನೊಬ್ಬನೆ ಕರ್ತನಾದ ಲಿಂಗದೇವರು!

542. ಬ್ರಹ್ಮ-ವಿಷ್ಣು-ಮಹೇಶ್ವರರು ದೇವರಲ್ಲ

ಒಬ್ಬ ಕೆಂಚನೊಬ್ಬ ಕರಿಕನೊಬ್ಬ ಶುದ್ಧ ಧವಳಿತನೆಂತಯ್ಯಾ ಲಿಂಗವೆ?
ಒಬ್ಬರಿಗೊಬ್ಬರು ಘನವೆಂಬರು; ಅದೆಂತಯ್ಯಾ?
ಒಬ್ಬರಿಗೊಬ್ಬರು ಹಿರಿದೆಂಬರು; ಎಂತಯ್ಯಾ?
ಬ್ರಹ್ಮಂಗೆ ಪ್ರಳಯ ವಿಷ್ಣುವಿಂಗೆ ಮರಣ ಉಂಟು
ನಮ್ಮ ಲಿಂಗದೇವಂಗಿಲ್ಲ. - ಬ.ವ.ದೀ. 540

ಪುರಾಣಗಳಲ್ಲಿ ವಿವಿಧ ದೇವತೆಗಳ ವರ್ಣನೆ ಬರುತ್ತದೆ. ಆಯಾ ದೇವತೆಗಳ ಪುರಾಣದಲ್ಲಿ ಆ ದೇವತೆಗಳನ್ನೇ ಇನ್ನಿತರ ದೇವತೆಗಿಂತ ಶ್ರೇಷ್ಠವೆಂದು ಬಣ್ಣಿಸಲಾಗುವುದು. ಚತುರ್ಮುಖ ಬ್ರಹ್ಮನು ಕೆಂಪಗಿದ್ದಾನೆಂದು, ಕೃಷ್ಣನು ಕಪ್ಪಗಿದ್ದಾನೆಂದು, ಶಿವನು ಬೆಳ್ಳಗಿದ್ದಾನೆಂದು ಹೇಳಲಾ ಗುವುದು. ದೇವನಿಗೆ ಬಣ್ಣಗಳು ಇರುತ್ತವೆಯೆ? ಶರೀರ, ಆಕಾರ, ಬಣ್ಣ ಇರುವವರು ದೇವರೆ? ಬ್ರಹ್ಮ ವಿಷ್ಣು, ಶಿವ ಎಲ್ಲರೂ ಒಂದು ಕಾಲದಲ್ಲಿ ಹುಟ್ಟಿ ಇನ್ನೊಂದು ಸಮಯದಲ್ಲಿ ಮರಣ ಹೊಂದಿದ್ದಾರೆ. ಸೃಷ್ಟಿಕರ್ತನಾದ ಲಿಂಗ ದೇವನಿಗೆ ಮಾತ್ರ ಮರಣವಿಲ್ಲ. ಪ್ರಳಯವೂ ಇಲ್ಲ.

543. ಹರಿ-ಹರ ಒಂದೇ ಅಲ್ಲ

ಹರಿ ಹರರೊಂದೆ ಎಂದಡೆ, ಸುರಿಯವೆ ಬಾಯಲ್ಲಿ ಬಾಲಹುಳಗಳು.

ಹರಿಗೆ ಹತ್ತು ಪ್ರಳಯ, ಬ್ರಹ್ಮಂಗನಂತ ಪ್ರಳಯ;
ಹರಂಗೆ ಪ್ರಳಯ ಉಂಟೆಂಬುದ ಬಲ್ಲಡೆ ನೀವು ಹೇಳಿರೆ?
ಪ್ರಳಯ ಪ್ರಳಯ ಅಂದಂದಿಗೆ;
ಹಳೆಯ ಲಿಂಗದೇವ. - ಬ.ವ.ದೀ. 541

ಹರಿ ಮತ್ತು ಹರ ಬೇರೆ ಬೇರೆಯಲ್ಲ ಒಂದೇ ಎಂದು ಮತೀಯ ಸಾಮರಸ್ಯವನ್ನು ತರಲಿಕ್ಕಾಗಿ ಅನೇಕರು ಹೇಳುವುದುಂಟು. ಹಾಗೆ ಹೇಳುವವರ ಬಾಯಿಯಲ್ಲಿ ಬಾಲ ಹುಳುಗಳು ಸುರಿಯವೆ? ಎಂದು ಪ್ರಶ್ನಿಸುತ್ತಾರೆ ಬಸವಣ್ಣನವರು. ಏಕೆಂದು ಜನರು ಪ್ರಶ್ನಿಸಬಹುದು. ಅವರ ಬಗ್ಗೆ ಹೇಳುವ ಕಥೆಗಳನ್ನು ನೋಡಿದಾಗ ತಿಳಿಯುತ್ತದೆ. ಹರಿಯು ಭೃಗು ಮಹರ್ಷಿಯ ಶಾಪಕ್ಕೆ ತುತ್ತಾಗಿ ಹತ್ತು ಜನ್ಮಗಳನ್ನು ಎತ್ತಿ ಕಾಮಕ್ರೋಧಾದಿಗಳಲ್ಲಿ ಬಳಲಬೇಕಾಯಿತು. ಬ್ರಹ್ಮನು ತನ್ನ ಮಗಳನ್ನೇ ಮೋಹಿಸಿ ಪಾಪಾವೃತನಾಗಿ ಪೂಜೆಯ ಸ್ಥಾನವನ್ನು ಕಳಕೊಂಡುದಲ್ಲದೆ ಪಾಪ ಪರಿಹಾರಾರ್ಥ ಅನಂತ ಜನ್ಮಗಳನ್ನು ಎತ್ತಬೇಕಾಯಿತು. ಆ ರೀತಿ ಶಿವ (ಹರ)ನು ಪುನಃ ಪುನಃ ಜನ್ಮವೆತ್ತಲಿಲ್ಲ. ಒಬ್ಬನೇ ಶಿವನು ಪಂಚವಿಂಶತಿ ಲೀಲೆಗಳನ್ನು ಮಾಡಿ ತೋರಿಸಿದನು. ಜೀವನ್ಮುಕ್ತನಾದನು. ಈ ಮೂವರಿಗೂ ಜನನ- ಮರಣಗಳುಂಟು. ಲಿಂಗದೇವನಿಗೋ ಅಂಥ ಪ್ರಳಯವಿಲ್ಲ, ಅವನು ಪ್ರಳಯಾತೀತ.

ವೈಷ್ಣವ ಪುರಾಣಗಳ ಪ್ರಕಾರ ವಿಷ್ಣುವು 10 ಅವತಾರಗಳನ್ನು ಎತ್ತಿದನು. ಶೈವಾಗಮ, ಶಿವ ಪುರಾಣಗಳ ಪ್ರಕಾರ ಶಿವನು ಅಭವ, ಅವನಿಗೆ ಭವವಿಲ್ಲ. ವಿಷವನ್ನು ಕುಡಿದುದು, ದಕ್ಷ ಸಂಹಾರ, ಪಾರ್ವತಿಯನ್ನು ವಿವಾಹವಾದುದು ಇವುಗಳೆಲ್ಲ ಶಿವನ ಜೀವನದಲ್ಲಿ ಘಟಿಸಿದ ಘಟನೆಗಳು ಕೃಷ್ಣನ ಜೀವನದ ರೀತಿಯನ್ನು ನೋಡಿದಾಗ ಅವನ ಬಾಲ್ಯ, ಯೌವನ, ಗೃಹಸ್ಥ ಜೀವನ ಎಲ್ಲವೂ ಲೌಕಿಕ ರೀತಿಯಲ್ಲಿ ಕಾಣಬರುವುವು. ಶಿವನ ಜೀವನ ನೋಡಿದಾಗ ಯೋಗ, ತಪಸ್ಸು, ನೃತ್ಯ, ಸಂಗೀತ ಮುಂತಾದ ದೈವಿಕತೆ ಕಾಣಬರುವುದು. ಆದ್ದರಿಂದ ಇಬ್ಬರೂ ಒಂದೆ ಎಂಬ ಮಾತು ಬಸವಣ್ಣನವರಿಗೆ ಒಪ್ಪಿಗೆಯಾಗುತ್ತಿಲ್ಲ.

544. ವಿಷ್ಣು ಕರ್ಮಿ ರುದ್ರ ನಿಷ್ಕರ್ಮಿ

ವಿಷ್ಣು ಕರ್ಮಿ ರುದ್ರ ನಿಷ್ಕರ್ಮಿ: ಕ್ರಮವನರಿಯದೆ ನುಡಿವಿರೊ!
ವೇದ ಶ್ರುತಿಗಳ ತಿಳಿಯಲರಿಯದೆ ವಾದವ ಮಾಡುವರೆಲ್ಲ ಕೇಳಿ;
ವಿಷ್ಣು ನಾನಾ ಯೋನಿಯಲ್ಲಿ ಬಾರದ ಭವಂಗಳಲ್ಲಿ ಬರುತ್ತಿಪ್ಪ;
ರುದ್ರನಾವ ಯೋನಿಯಲ್ಲಿ ಬಂದನೆಂದು ನೀವು ಹೇಳಿರೊ!
ಓಂ ತ್ರೀಣಿ ಪದಾನಿ ವಿಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ
ಅತೋ ಧರ್ಮಾಣಿ ಧಾರಯನ್॥
ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿ ಪಸ್ಪಶೇ।
ಇಂದ್ರಸ್ಯ ಯುಜ್ಯ ಸಖಾ॥
ತದ್ ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ।

ದಿವೀವ ಚಕ್ಷುರಾತತಂ।।
ತದ್ ವಿಪ್ರಾಸೋ ವಿಪನ್ಯವೋ ಜಾಗೃವಾಂ ಸಃ ಸಮಿಂಧತೇ।
ವಿಷ್ಣೋರ್ಯತ್ಪರಮಂ ಪದಂ।।
ಎಂಬ ಶ್ರುತಿ ವಚನವ ತಿಳಿಯಿಂ ಭೋ!
ಮರ್ಮವನೆತ್ತಿ ನುಡಿದಲ್ಲದೆ ನಿಲ್ಲಿರಿ;
ನಿಮ್ಮ ಕರ್ಮವು ಅತ್ಯತಿಷ್ಠದಶಾಂಗುಲದಿಂದತ್ತತ್ತಲೆ,
ಕೂಡಲಸಂಗಮದೇವಾ. – ಬ.ವ.ದೀ. 542

ವೈಷ್ಣವರೇ ಹೇಳುವಂತೆ ವಿಷ್ಣುವು ಕರ್ಮಿ.ಅವನು ಒಂದು ದಿನ ಲಕ್ಷ್ಮಿಯೊಡನೆ ವೈಕುಂಠದಲ್ಲಿರುವಾಗ ಭೃಗು ಮಹರ್ಷಿಯು ಬಂದ. ಬಾಗಿಲನ್ನು ಕಾಯುತ್ತಿದ್ದ ಜಯವಿಜಯರು ಮಹರ್ಷಿಯನ್ನು ತಡೆದರು. ಅವನಿಗೆ ಬಹಳ ಕೋಪ ಬಂದಿತು. ವಿಷ್ಣುವು ನಂತರ ಮಹರ್ಷಿಯನ್ನು ಗೌರವಿಸಿದನಾದರೂ ಮಹರ್ಷಿ ವಿಷ್ಣುವಿಗೆ 10 ಅವತಾರ ಎತ್ತುವಂತೆ ಶಾಪ ಕೊಟ್ಟ. ಜಯ ವಿಜಯರು ಸಹ ಶಾಪ ಗ್ರಸ್ತರಾಗಿ ಹುಟ್ಟಿದರಂತೆ. ಹೀಗಾಗಿ ವಿಷ್ಣುವು ಕೂರ್ಮ, ವರಾಹ ಇತ್ಯಾದಿ ಅವತಾರಗಳನ್ನು ಎತ್ತಿದನಂತೆ. ಎಷ್ಟು ಹಾಸ್ಯಾಸ್ಪದ ಕಥೆ ಇದು! ಶಾಪ ಪಡೆದುಕೊಂಡವರು ಶ್ರೇಷ್ಠರಾಗುವರೋ? ದಶಾವತಾರವು ವಿಷ್ಣುವಿನ ಕರ್ಮದ ಕಥೆ ಈ ರೀತಿ ರುದ್ರನು ಅರ್ಥಾತ್ ಶಿವನು ಯಾರಿಂದಲೂ ಶಾಪಕ್ಕೆ ಒಳಗಾಗಲಿಲ್ಲ, ಜನ್ಮಗಳನ್ನು ಎತ್ತಲಿಲ್ಲ. ಅವನು ಯೋಗ, ತಪಸ್ಸು ಮುಂತಾಗಿ ಮಾಡಿ ನಿಷ್ಕರ್ಮಿಯಾದ. ಈ ಮರ್ಮವನ್ನರಿಯದೆ ವಿಷ್ಣುವೇ ಶ್ರೇಷ್ಠ ಎಂಬುವವರಿಗೆ, ಅಥವಾ ವಿಷ್ಣು ಮತ್ತು ಶಿವ ಇಬ್ಬರೂ ಒಂದೆ ಎನ್ನುವವರಿಗೆ ಬಸವಣ್ಣನವರು ಸವಾಲು ಹಾಕುತ್ತಾರೆ. ವೇದ, ಶ್ರುತಿಗಳು ಸಹ ಶಿವನ ಮಹಿಮೆಯನ್ನು ಕೊಂಡಾಡುತ್ತವೆ. (ನನಗೇನು ವಿಷ್ಣುವಿನ ನಿಂದೆ ಮಾಡುವ ಮನಸ್ಸಿಲ್ಲ, ಆದರೆ ನೀವು)ಮರ್ಮವನ್ನು ಎತ್ತಿ ನೋಡಿದಲ್ಲದೆ ಮಾತು ನಿಲ್ಲಿಸುವುದಿಲ್ಲ. ಕರ್ಮತಾಚರಣೆಗಳನ್ನೇ ತುಂಬಿಕೊಂಡು ನೀವು ನಡೆಯುತ್ತೀರಿ. ನಿಮಗೆ ಕೂಡಲ ಸಂಗಮ ದೇವನು ನಿಲುಕನು, ಹತ್ತು ಅಂಗುಲ ಆಚೆಗೇ ಇರುವನು.

545. ದೇವರಿಗೆ ಮಾತಾಪಿತರಿಲ್ಲ

ಅಮೃತವತಿ ಸೋಮಶಂಭುವಿಗೆ ಹುಟ್ಟಿದಾತ ಇಂದ್ರ,
ಸತ್ಯಋಷಿ ಜೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ.
ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು.
ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ,
ಇವರೆಲ್ಲರು ಯೋನಿಜರೆಂಬುದ ತ್ರೈಜಗ ಬಲ್ಲುದು,
ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ಲಿಂಗದೇವಂಗೆ
ಮಾತಾಪಿತರುಳ್ಳಡೆ ಹೇಳಿರೋ! ಬ.ವ.ದೀ. 543

ಗುರು ಬಸವಣ್ಣನವರಿಗೆ ವೇದ, ಶ್ರುತಿ, ಪುರಾಣಗಳ ಜ್ಞಾನ ಆಳವಾಗಿದ್ದಿತು ಎಂದು ಈ ವಚನಗಳಿಂದ ತಿಳಿದು ಬರುತ್ತದೆ. ಇಂದ್ರ, ಬ್ರಹ್ಮ, ವಿಷ್ಣು, ಅರುಹ ಎಲ್ಲರನ್ನೂ ದೇವರು ಎನ್ನುವುದನ್ನು

ಕಂಡಾಗ ಅವರಿಗೆ ಅಚ್ಚರಿ ಎನಿಸುತ್ತದೆ. ಅಮೃತವತಿ ಎಂಬ ತಾಯಿ ಸೋಮಶಂಭು ಎಂಬ ತಂದೆಗೆ ಜನಿಸಿದಾತ ಇಂದ್ರ, ಸತ್ಯಋಷಿ ಎಂಬ ತಂದೆ ಜೇಷ್ಠಾದೇವಿ ಎಂಬ ತಾಯಿಗೆ ಜನಿಸಿದಾತ ಬ್ರಹ್ಮ. ವಸುದೇವ ಎಂಬ ತಂದೆ ದೇವಕಿ ಎಂಬ ತಾಯಿಗೆ ಜನಿಸಿದಾತ ಕೃಷ್ಣ. ನಾಭಿರಾಜ ಎಂಬ ತಂದೆ ಮರುತಾದೇವಿ ಎಂಬ ತಾಯಿಗೆ ಜನಿಸಿದಾತ ಅರುಹ. ಇವರೆಲ್ಲರೂ ಮಾತೃಗರ್ಭದಲ್ಲಿ ಜನಿಸಿದವರು. ದೇವರೋ ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದವನು. ಅಂಥ ಲಿಂಗದೇವನಿಗೆ ಮಾತಾಪಿತರು ಇದ್ದರೆ ಹೇಳಿರಿ?

546. ದೇವ ಒಬ್ಬನೇ ಒಬ್ಬ

ಇಬ್ಬರು ಮೂವರು ದೇವರೆಂದು
ಉಬ್ಬಿ ಮಾತನಾಡಬೇಡ
ಒಬ್ಬನೇ ಕಾಣಿರೊ, ಇಬ್ಬರೆಂಬುದು ಹುಸಿ ನೋಡಾ!
ಲಿಂಗದೇವನಲ್ಲದೆ ಇಲ್ಲವೆಂದಿತ್ತು ವೇದ. ಬ.ವ.ದೀ. 544

ಪಾರ್ವತಿ ಮತ್ತು ಶಿವ -ಇಬ್ಬರು ದೇವರು ಅಥವಾ ಬ್ರಹ್ಮ-ವಿಷ್ಣು- ಮಹೇಶ್ವರ ಈ ಮೂವರು ದೇವರು ಎಂದು ಸಂತೋಷದಿಂದ ಉಬ್ಬಿ ಮಾತನಾಡಬೇಡ; ಸೃಷ್ಟಿಕರ್ತನಾದ ದೇವರು ಒಬ್ಬನೆ! ಇಬ್ಬರು ಮೂವರು ಎಂಬುದು ಸುಳ್ಳು. ಸೃಷ್ಟಿಕರ್ತ ಲಿಂಗದೇವನ ಹೊರತು ಅನ್ಯ ದೇವರು ಎಂಬುದಿಲ್ಲ ಎಂದು ಸ್ವತಃ ವೇದವೇ ಹೇಳಿದೆ.

547. ಬ್ರಹ್ಮ, ವಿಷ್ಣು ದೇವರಲ್ಲ.

ಹುಟ್ಟಿಸುವಾತ ಬ್ರಹ್ಮನೆಂಬರು, ರಕ್ಷಿಸುವಾತ ವಿಷ್ಣುವೆಂಬರು ನೋಡಾ,
ಬ್ರಹ್ಮ ತನ್ನ ಶಿರವನ್ನೇಕೆ ಹುಟ್ಟಿಸಲಾರ?
ವಿಷ್ಣು ತನ್ನ ಮಗನನ್ನೇಕೆ ರಕ್ಷಿಸಲಾರ?
ದುಷ್ಟನಿಗ್ರಹ ಶಿಷ್ಟಪ್ರತಿಪಾಲಕ ನಮ್ಮ ಲಿಂಗದೇವ. ಬ.ವ.ದೀ. 545

ಜಗತ್ತನ್ನು ಸೃಷ್ಟಿ ಮಾಡಿದವನು ಬ್ರಹ್ಮ; ಈಗ ಅದರ ಪಾಲನೆ ಮಾಡುವನು ವಿಷ್ಣು ಎಂದು ಹೇಳುವುದುಂಟು. ಬ್ರಹ್ಮನ ಅಹಂಕಾರ ಮಿತಿಮೀರಿದಾಗ ವೀರಭದ್ರನು ಅವನ ತಲೆಯ ಮೇಲೆ ಇದ್ದ ತಲೆಯನ್ನು ಚಿವುಟಿ ಹಾಕಿದ. ಒಂದು ವೇಳೆ ಬ್ರಹ್ಮನು ಸೃಷ್ಟಿಕರ್ತನೇ ಆಗಿದ್ದರೆ ತನ್ನ ತಲೆಗೆ ಮರುಹುಟ್ಟು ಕೊಡಲಿಲ್ಲವೇಕೆ? ವಿಷ್ಣುವಿನ ಮಗ ಕಾಮ. ಶಿವನು ತನ್ನ ಮೂರನೆಯ ಕಣ್ಣು ತೆರೆದು ಕಾಮನನ್ನು ಸುಟ್ಟು ಭಸ್ಮೀಭೂತನಾಗಿ ಮಾಡಿದಾಗ ಏಕೆ ತನ್ನ ಪುತ್ರ ಕಾಮನನ್ನು ವಿಷ್ಣುವು ರಕ್ಷಿಸಿಕೊಳ್ಳದೇ ಹೋದ? ಒಬ್ಬನೇ ಆದ ಸೃಷ್ಟಿಕರ್ತ ಲಿಂಗದೇವನು ದುಷ್ಟರನ್ನು ನಿಗ್ರಹಿಸಿ ಸಾತ್ವಿಕರನ್ನು ಸದ್ಭಕ್ತರನ್ನು ರಕ್ಷಿಸಬಲ್ಲ.

548. ವೇದ ವ್ಯಾಸರ ಭಂಗ

ಕೇಶವನಲ್ಲದೆ ಅಂತಃಪರ ದೈವವಿಲ್ಲವೆಂದು
ವೇದವ್ಯಾಸಮುನಿ ಭಂಗವಾದುದನರಿಯಿರೆ?
ಅಹಂ ಸರ್ವಜಗತ್‌ಕರ್ತಾ ಮಮಕರ್ತಾ ಮಹೇಶ್ವರಃ!

ಎಂದು ವಿಷ್ಣು ಹೇಳಿದ ವಚನವ ಮರೆದಿರಲ್ಲಾ!
ಕೂಡಲಸಂಗಮದೇವನು
ದಕ್ಷಯಜ್ಞವ ಕೆಡಿಸಿದುದ ಮರೆದಿರಲ್ಲಾ! ಬ.ವ.ದೀ. 546

ಭಾರತ ದೇಶದಲ್ಲಿ ವೇದಗಳ ರಚನೆಯ ನಂತರ, ಉಪನಿಷತ್ತುಗಳ ರಚನೆ. ವೇದ ವ್ಯಾಸರ ಕಾಲ ಎಂದರೆ ಪುರಾಣಯುಗ. ಅವರು ಹದಿನೆಂಟು ಪುರಾಣಗಳನ್ನು ಬರೆದರು. ಕೇಶವ (ವಿಷ್ಣು)ನೇ ಸರ್ವಶ್ರೇಷ್ಠ, ಅವನನ್ನು ಮೀರಿದ ದೈವವಿಲ್ಲ ಎಂದು ವಿಷ್ಣೂಪಾಸಕನು ಆದ ವ್ಯಾಸ ಹೇಳುತ್ತಿದ್ದನು. ಒಮ್ಮೆ ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಹರಿಸರ್ವೋತ್ತಮ ಎಂದು ಕೈಯೆತ್ತಿ ಸಾರುತ್ತಿರಲು ಅವನ ತೋಳು ಕತ್ತರಿಸಿಹೋಯಿತು. ಆಗ ವ್ಯಾಸನು ಹರಿಯನ್ನು ಸ್ಮರಿಸಲು ಅವನು ಬಂದು ಅಹಂ ಸರ್ವ ಜಗತ್ಕರ್ತ ಮಮಕರ್ತಾ ಮಹೇಶ್ವರಃ ಎಂದು ತಿಳಿಹೇಳಿದನು. ಆಗ ವ್ಯಾಸನು ನಿಷ್ಠೆಯಿಂದ ಶಿವಸ್ತೋತ್ರವನ್ನು ಮಾಡಿ ಕಳೆದುಕೊಂಡ ತೋಳುಗಳನ್ನು ಮರಳಿ ಪಡೆದನು.

ಹೀಗೆ ಸ್ವತಃ ವಿಷ್ಣುವೇ ನಾನು ಸರ್ವಜಗತ್ತಿನ ಕರ್ತೃ. ಆದರೆ ನನ ಕರ್ತೃ ಮಹೇಶ್ವರ ಎಂದು ಹೇಳಿರುವಾಗ ನಿಮಗೆ ತಿಳಿಯುವುದಿಲ್ಲವೆ? ಶಿವನನ್ನು ಅಗೌರವದಿಂದ ಕಂಡ ದಕ್ಷಬ್ರಹ್ಮನ ಪಾಡು ಏನಾಯಿತು? ದಕ್ಷಬ್ರಹ್ಮನ ಅಹಂಕಾರ ಅಡಗಿಸಲು ವೀರಭದ್ರ ದಕ್ಷಯಾಗವನ್ನು ಕೆಡಿಸಿದುದನ್ನು ನೀವು (ವಿಷ್ಣುಭಕ್ತರು) ಮರೆತುಬಿಟ್ಟಿರಾ?

ಈ ಎಲ್ಲ ವಚನಗಳು ಬಸವರಸರು ಏಕದೇವತಾ (ಶಿವ)ಉಪಾಸಕರಾಗಿದ್ದಾಗ ಬರೆದವುಗಳು. ಶೈವ-ವೈಷ್ಣವ-ಜೈನ ಸಂಘರ್ಷಗಳು ನಡೆಯುತ್ತಿದ್ದ ಕಾಲವದು. ತಾವು ಪೂಜಿಸುವ ದೇವತೆಯನ್ನು ಮುಂದಿಟ್ಟುಕೊಂಡು ವಾದ ವಿವಾದ ನಡೆಸಲಾಗುತ್ತಿತ್ತು. ಇಂಥ ವಚನಗಳು ಮತಾಂಧತೆಯ ಭಾವ ತಂದುಕೊಡುವ ಕಾರಣ ಅವನ್ನು ಕೈಬಿಡಬಹುದಲ್ಲವೆ? ಎಂದು ಕೆಲವರ ಪ್ರಶ್ನೆ. ಇನ್ನಿತರ ಆವೃತ್ತಿಗಳಲ್ಲಿ ಅವು ಇರುವುದರಿಂದ ಅರ್ಥ ಮಾಡದೆ ಕೈಬಿಟ್ಟರೆ ಓದುಗರಿಗೆ ಸಂದೇಹವು ಹಾಗೆಯೇ ಉಳಿಯುತ್ತದೆ. ಎಂಬ ಕಾರಣದಿಂದ ವಿಶ್ಲೇಷಿಸಲಾಗುತ್ತಿದೆ. ಡಾ|| ಎಲ್.ಬಸವರಾಜ ಅವರು ಬರೆದ ವ್ಯಾಖ್ಯಾನ ಗ್ರಂಥದಲ್ಲಿ ಬಹುದೇವತೋಪಾಸನೆಯ ಖಂಡನೆ, ಏಕದೇವೋಪಾಸನೆಯ ಮಂಡನೆ ಇರುವ ವಚನಗಳನ್ನು ವ್ಯಾಖ್ಯಾನಿಸದೆ ಕೈಬಿಡಲಾಗಿದೆ.

549. ಶಿವ ಪಾರಮ್ಯ

ನಾರಾಯಣನೆಂಬವನ ಕಾಣೆ ಗೀರಾಯಣನೆಂಬವನ ಕಾಣೆ!
ಬೊಮ್ಮನೆಂಬವನ ಕಾಣೆ ಬೊಮ್ಮಗನೆಂಬವನ ಕಾಣೆ!
ವಿಷವಟ್ಟಿ ಸುಡುವಲ್ಲಿ, ವೀರಭದ್ರ ಕೊಲುವಲ್ಲಿ
ಕೂಡಲಸಂಗಯ್ಯಂಗೆ ಶರಣೆಂದು ಮೊರೆಯಿಟ್ಟರೆಲ್ಲರು. ಬ.ವ.ದೀ. 547

ನಾರಾಯಣ, ಬ್ರಹ್ಮ ಇವರನ್ನು ನಾ ಕಾಣೆ. ಇತಿಹಾಸದಲ್ಲಿ ದಾಖಲಾಗಿರುವುದು ಏನು? ದೇವತೆಗಳು ಮತ್ತು ಅಸುರರು ಸಮುದ್ರ ಮಥನ ಮಾಡಿದಾಗ ಅದರ ಫಲವಾಗಿ ವಿಷವು ಉತ್ಪತ್ತಿಯಾಗಿ ಎಲ್ಲರನ್ನು ಸುಡಲಾರಂಭಿಸಿತು. ಆಗ ದೇವತೆಗಳಾದಿಯಾಗಿ ಮೊರೆ ಇಟ್ಟುದು

ಯಾರಲ್ಲಿ? ಯೋಗಿರಾಜ ಶಿವನಲ್ಲಿ, ಅವನು ಆ ವಿಷವನ್ನು ಕುಡಿದು ಜಗತ್ತನ್ನು ಉಳಿಸಿದನಲ್ಲವೆ? ದಕ್ಷಯಾಗವನ್ನು ಧ್ವಂಸ ಮಾಡಿ ಅಲ್ಲಿದ್ದ ದೇವತೆಗಳನ್ನು ಮರ್ದಿಸುವಾಗ ಉದ್ರಿಕ್ತನಾಗಿದ್ದ ವೀರಭದ್ರನನ್ನು ಶಾಂತಗೊಳಿಸಲು ಶಿವನೇ ಬೇಕಾಯಿತಲ್ಲವೆ?

550. ಕೂಡಲ ಸಂಗಯ್ಯನೇ ದೇವನು

ಅಮೃತವ ಕಡೆವಲ್ಲಿ, ವಿಷವಟ್ಟಿ ಸುಡುವಲ್ಲಿ,
ದೇವರೆಂಬವರೆತ್ತ ಹೋದರೇನಿಂ ಭೋ?
ಅಂದೊಮ್ಮೆ ಓಡಿಹೋಗಿ ಆ ಶಿವನ ಮೊರೆಹೊಗುವಂದು
ದೇವರೆಂಬರೆತ್ತ ಹೋದರೇನಿಂ ಭೋ?
ಕೂಡಲ ಸಂಗಯ್ಯ ದೇವರಿಗೆ ದೇವನು;
ನೀವೆಲ್ಲಾ ಆಳೆಂಬುದನರಿಯಿರಿಂ ಭೋ!

- ಬ.ವ.ದೀ. 548

ಅಮೃತಕಾಗಿ ಸಮುದ್ರವನ್ನು ಮಥಿಸುವಾಗ ಘೋರವಾದ ವಿಷವು ಉತ್ಪತ್ತಿಯಾಯಿತು. ಅದು ಎಲ್ಲವನ್ನೂ ಸುಡಲು ಆರಂಭಿಸಿದಾಗ ದೇವತೆಗಳಾದ ನೀವೆಲ್ಲ ಎಲ್ಲಿಗೆ ಓಡಿಹೋದಿರಿ? ಆಗ ಋಷಿಮುನಿಗಳು, ಭಕ್ತರು ಹೋಗಿ ಯೋಗಿರಾಜ ಶಿವನಿಗೆ ಮೊರೆ ಇಡುವಾಗ ದೇವರೆಂಬುವ ನೀವೆಲ್ಲ ಎತ್ತ ಹೋದಿರಿ? ವಿಷವನ್ನು ಕುಡಿದು ಎಲ್ಲರನ್ನು ಉಳಿಸಿದ ಶಿವನು ಎಲ್ಲ ದೇವತೆಗಳಿಗೆ ಮಿಗಿಲಾದ ದೇವನು. ಉಳಿದೆಲ್ಲ ನೀವು ಆತನ ಆಳುಗಳು.

551. ಲಿಂಗದೇವನೇ ನಿತ್ಯ

ವಿಷ್ಣು ಬಲ್ಲಿದನೆಂಬೆನೆ?
ದಶಾವತಾರದಲ್ಲಿ ಭಂಗಬಟ್ಟುದಕ್ಕೆ ಕಡೆಯಿಲ್ಲ!
ಬ್ರಹ್ಮ ಬಲ್ಲಿದನೆಂಬೆನೆ?
ಶಿರಹೋಗಿ ನಾನಾವಿಧಿಯಾದ!
ವೇದ ಬಲ್ಲಿತ್ತೆಂಬೆನೆ?
ನಾನಾ ಮುಖದಲ್ಲಿ ಸ್ತುತಿಯಿಸಿತ್ತಲ್ಲದೆ
ಲಿಂಗದ ನಿಲುಕಡೆಯ ಕಾಣದು!
ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದಶ್ರೀ !
ಪುರಾಣ ಬಲ್ಲಿತ್ತೆಂಬನೆ? ವಾಯ ಹೊಂದಿತ್ತು!
ಇದು ಕಾರಣ ಲಿಂಗದೇವನೆ ನಿತ್ಯ;
ಉಳಿದ ದೈವವೆಲ್ಲ ಅನಿತ್ಯ ಕಾಣಿ ಭೋ! ಬ.ವ.ದೀ. 549

ಬಲ್ಲಿದ ಎಂದರೆ ಜ್ಞಾನಿ. ವಿಷ್ಣುವನ್ನು ಜ್ಞಾನಿ ಎನ್ನೋಣವೆ? ಹತ್ತು ಅವತಾರಗಳನ್ನು ಎತ್ತಿ ಹಲವಾರು ಸಂಕಷ್ಟಕ್ಕೆ ಒಳಗಾಗುತ್ತಿದ್ದನೆ? ಜ್ಞಾನಿಯಾದವನು ಜೀವನ್ಮುಕ್ತನಾಗುವನು. ಸತ್ತ ನಂತರ ವಿದೇಹ ಮುಕ್ತಿ ಪಡೆದು ಮತ್ತೆ ಹುಟ್ಟಿ ಬರುವುದಿಲ್ಲ. ವಿಷ್ಣುವು ಜ್ಞಾನಿಯು, ಜೀವನ್ಮುಕ್ತನೂ ಆಗಿದ್ದರೆ

ಮತ್ತೆ ಹುಟ್ಟಿ ಬರುತ್ತಿದ್ದನೆ? ಕೂರ್ಮ, ಹಂದಿಯಂತಹ ಕ್ಷುದ್ರ ಪ್ರಾಣಿಯ ರೂಪದಲ್ಲಿ ಅವತಾರ ಎತ್ತುತ್ತಿದ್ದನೆ?

ಬ್ರಹ್ಮನನ್ನು ಜ್ಞಾನಿ ಎನ್ನೋಣವೆ ವೀರಭದ್ರನಿಂದ ತಲೆ ಕತ್ತರಿಸಲ್ಪಟ್ಟು. ಕುರಿಯ ತಲೆಯನ್ನು ಹೊಂದಿದ. ವೇದವು ಜ್ಞಾನಮಯ ಎನ್ನೋಣವೇ? ದೇವನನ್ನು ಶಬ್ದ ಜಾಲವನ್ನು ಹರಡಿ ನಾನಾ ಬಗೆಯಲ್ಲಿ ಸ್ತುತಿಸುವುದೇ ವಿನಾ ದೇವನನ್ನು ಕಾಣುವ ಮಾರ್ಗ ತೋರದು. ಶಾಸ್ತ್ರಗಳು ಜ್ಞಾನಪೂರ್ಣ ಎನ್ನೋಣವೆ? ಅವು ತರ್ಕವಿತರ್ಕಗಳಿಂದ ಕೂಡಿದ ಶಬ್ದ ಸಂತೆ. ಪುರಾಣಗಳು ಜ್ಞಾನಪೂರ್ಣ ಎನ್ನೋಣವೆ? ಅವು ವ್ಯರ್ಥ (ವಾಯ)ಚರ್ಚೆಗಳು. ಸೃಷಿಕರ್ತನಾದ ಲಿಂಗದೇವ ನೊಬ್ಬನೇ ನಿತ್ಯನು, ಶಾಶ್ವತನು; ಉಳಿದ ದೈವಂಗಳು ಅನಿತ್ಯ.

552. ಮೆರೆಯಲಹುದು ಲಿಂಗದೇವರ

ಮೆರೆಯಲಾಗದು ಹರಿಯ, ಮೆರೆಯಲಾಗದು ಬ್ರಹ್ಮನ
ಮೆರೆಯಲಾಗದು ತೆತ್ತೀಸಕೋಟಿ ದೇವರ್ಕಳ,
ನಮ್ಮ ಲಿಂಗದೇವರ ಮೆರೆಯಲಹುದು. ಬ.ವ.ದೀ. 550

ಇನ್ನುಳಿದ ಪ್ರಕಟಣೆಗಳಲ್ಲಿ ಮರೆಯಲಾಗದು ಎಂದು ಬರೆಯಲಾಗಿದೆ. ಹೀಗೆ ಬರೆದುದೇ ಆದರೆ ಏಕದೇವೋಪಾಸನೆಯ ವಿರುದ್ಧ ಬಹುದೇವತೋಪಾಸನೆಗೆ ಪ್ರೋತ್ಸಾಹ ಕೊಟ್ಟಂತೆ ಆಗುವುದು. ಹರಿಯನ್ನು ಬ್ರಹ್ಮನನ್ನು 33 ಕೋಟಿ ದೇವತೆಗಳನ್ನು ಮರೆಯಬಹುದು. ಕೂಡಲ ಸಂಗಮ ದೇವ (ಲಿಂಗದೇವ)ನನ್ನು ಮರೆಯಬೇಕು ಎಂದು ಅರ್ಥವಾಗುವುದು. ಅದಕ್ಕಾಗಿ ನಾನು ಮರೆಯಲಾಗದು ಎಂಬುದನ್ನು ತಿದ್ದಿ ಮೆರೆಯಲಾಗದು ಎಂದು ಮಾಡಿದ್ದೇನೆ. ತಾಡ ಓಲೆಗಳಿಂದ ಪ್ರತಿ ಮಾಡಿಕೊಳ್ಳುವಾಗ ತಲೆಕಟ್ಟನ್ನು ಕೊಟ್ಟು "ಮೆ" ಬದಲು "ಮ" ಎಂದು ಬರೆದುಕೊಂಡಿರಬಹುದು. ಈ ರೀತಿ ಬದಲಾವಣೆ ಮಾಡಿ ಓದಿಕೊಂಡಾಗ ಅರ್ಥವು ಅದ್ಭುತವಾಗಿ ಸ್ಫುರಿಸುವುದು. ಮೆರೆಯಲಾಗದು ಹರಿಯ, ಬ್ರಹ್ಮನ, ತೆತ್ತೀಸಕೋಟಿ ದೇವರ್ಕಳ; ಅಂದರೆ ಹರಿಯನ್ನು, ಬ್ರಹ್ಮನನ್ನು, ಮೂವತ್ಮೂರು ಕೋಟಿ ದೇವತೆಗಳನ್ನು ವೈಭವಿಸಬೇಡ. ಸೃಷ್ಟಿಕರ್ತನಾದ ಲಿಂಗದೇವನನ್ನು ಮಾತ್ರ ವೈಭವಿಸು ಎಂದು ಹೇಳಿದಂತಾಗುವುದು.

(ನಾನು ಮಾಡಿರುವ ತಿದ್ದುಪಡಿಯಲ್ಲಿ ಇದು ಅತ್ಯಂತ ಅರ್ಥಗರ್ಭಿತವಾದ ತಿದ್ದುಪಡಿ ಎಂಬ ಹೆಮ್ಮೆ ನನಗಿದೆ. ಲಿಪಿಕಾರರಿಂದಾದ ಒಂದು ಮಹಾನ್ ತಪ್ಪನ್ನು ಸರಿಪಡಿಸಿದ ಹೆಮ್ಮೆಯೂ ನನಗಿದೆ.)

553. ಜೊಳ್ಳು ಕುಟ್ಟಬಾರದು.

ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ,
ರಸವನು ಹಡೆಯಲು ಬಾರದು.
ಮಳಲ ಹೊಸೆದಡೆ ಹೊಸೆದಂತಲ್ಲದೆ,
ಸರವಿಯ ಹಡೆಯಲು ಬಾರದು.

ನೀರ ಕಡೆದಡೆ ಕಡೆದಂತಲ್ಲದೆ,
ಬೆಣ್ಣೆಯ ಹಡೆಯಲು ಬಾರದು,
ನಮ್ಮ ಲಿಂಗದೇವನಲ್ಲದೆ
ಅನ್ಯ ದೈವಕ್ಕೆರಗಿದಡೆ
ಹೊಳ್ಳಕುಟ್ಟಿ ಕೈ ಹೊಟ್ಟಾದಂತೆ ಆಯಿತ್ತಯ್ಯಾ. ಬ.ವ.ದೀ. 551

ಬಿದರೆಲೆಯನ್ನು ಬಾಯಿಯಲ್ಲಿ ಹಾಕಿಕೊಂಡು ಅಗಿದರೆ ವ್ಯರ್ಥ ಪರಿಶ್ರಮವಾಗುವುದಲ್ಲದೆ ರಸವೇನೂ ಉತ್ಪತ್ತಿಯಾಗದು. ವೀಳೆಯ ಎಲೆಯನ್ನು ತಿಂದರೆ ಬಾಯಿ ರಸಪೂರ್ಣವಾಗುವುದು. ಇಷ್ಟೇ ಅಲ್ಲ ಬಿದಿರೆಲೆಯನ್ನು ತಿನ್ನುವುದರಿಂದ ನಾಲಿಗೆಯು ಕೊರೆದು ಹೋಗುವ ಸಂಭವವೂ ಉಂಟು; ಮರಳನ್ನು ಕೈಯಲ್ಲಿ ಹಾಕಿಕೊಂಡು ಹೊಸೆದರೆ ವ್ಯರ್ಥ ಪರಿಶ್ರಮ ಮತ್ತು ಮರಳು ಚುಚ್ಚಿ ಗಾಯವೂ ಆಗಬಹುದು. ಹಗ್ಗವಂತೂ ತಯಾರಾಗುವುದಿಲ್ಲ. ಅದರ ಬದಲು ಹತ್ತಿಯ ನೂಲನ್ನು ಹಾಕಿಕೊಂಡು ಹೊಸೆದರೆ ಬತ್ತಿ ತಯಾರಾಗುವುದು, ಉಡುಪು ಸಿದ್ಧವಾಗುವುದು. ಒಂದು ಹರವಿಯಲ್ಲಿ ನೀರನ್ನು ಹಾಕಿಕೊಂಡು ಕಡೆದರೆ ಕಡೆತದ ವ್ಯರ್ಥ ಪರಿಶ್ರಮವಲ್ಲದೆ ಬೆಣ್ಣೆ ಏನೂ ಸಿಗದು; ಕಡೆದುದಕ್ಕೆ ರಟ್ಟೆಗಳು ನೋವಾಗುತ್ತವಷ್ಟೆ!

ಅದೇ ರೀತಿ ಸೃಷ್ಟಿಕರ್ತ ಲಿಂಗದೇವನಲ್ಲದೆ ಅನ್ಯ(ಕಾಲ್ಪನಿಕ) ದೈವಗಳ ಆರಾಧನೆಯು ಜೊಳ್ಳು ಧಾನ್ಯವನ್ನು ಕುಟ್ಟಿ ರಟ್ಟೆ ನೋವಾಗುವುದಲ್ಲದೆ ಅಂಗೈಯೊಳಗೆ ಚರ್ಮವು ಸುಲಿದು ಹೊಟ್ಟು ಎದ್ದಂತೆ ಆಗುತ್ತದೆ; ಜೊಳ್ಳು ನುಣ್ಣಗಾಗಿ ಸುತ್ತಲೂ ಹೊಟ್ಟು ಹಾರುವುದು. ಸೃಷ್ಟಿಕರ್ತನ ಜ್ಞಾನದಿಂದ ಆತ್ಮವಿಶ್ವಾಸ, ವೈಚಾರಿಕತೆ ಬೆಳೆದರೆ ಅನ್ಯ ದೈವಗಳ, ಕ್ಷುದ್ರ ದೈವಂಗಳ ಆರಾಧನೆಯಿಂದ ಭಯ ಭ್ರಾಂತಿ ಹುಟ್ಟಿ ಮೂಢನಂಬಿಕೆ ವೃದ್ಧಿಯಾಗುವುದು. ಮಾಡುವ ಪೂಜೆ ಒಂದು ವ್ಯರ್ಥ ಪರಿಶ್ರಮವಾಗುವುದು.

554. ಬೇಡಿಕೊಂಡುಂಬುವ ದೈವಂಗಳು

ಆವಾಗಳೂ ಲೋಗರ ಮನೆಯ ಬಾಗಿಲ
ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು
ಹೋಗೆಂದಡೆ ಹೋಗವು ಕೆಲವು ದೈವಂಗಳು
ನಾಯಿಗಿಂತ ಕರಕಷ್ಟ ಕೆಲವು ದೈವಂಗಳು
ಲೋಗರ ಬೇಡಿಕೊಂಡುಂಬ ದೈವಂಗಳು
ತಾವೇನ ಕೊಡುವವು? ಲಿಂಗದೇವಾ. ಬ.ವ.ದೀ. 552

ಬುಟ್ಟಿಗಳಲ್ಲಿ ಹೊತ್ತುಕೊಂಡು ಕೆಲವು ದೈವಗಳನ್ನು ಹೆಣ್ಣುಮಕ್ಕಳು (ಯಲ್ಲಮ್ಮನ ಜೋಗತಿಯರಂತೆ) ತರುವುದುಂಟು. ಮನೆಯ ಮುಂದೆ ನಿಂತು ಭಿಕ್ಷೆ ಬೇಡುತ್ತಾರೆ, ಕಾಡುತ್ತಾರೆ. "ಅದು ಬೇಕು ಇದು ಬೇಕು, ಇನ್ನೂ ಬೇಕು" ಎಂದು ದುಂಬಾಲು ಬೀಳುತ್ತಾರೆ. ಹೋಗು ಎಂದರೆ ಹೋಗುವುದಿಲ್ಲ. ಜೊತೆಗೆ ಅಮ್ಮ(ದೇವರು) ಶಾಪ ಕೊಡ್ತಾಳೆ ಎಂಬ ಬೆದರಿಕೆ ಬೇರೆ. ನಾಯಿ ಯನ್ನು 'ಹಚಾ' ಎಂದು ಓಡಿಸಿದರೆ ದೂರ ಓಡಿ ಹೋಗುತ್ತದೆ. ಅದಕ್ಕಿಂತಲೂ ಕನಿಷ್ಠ

ಈ ದೈವಂಗಳು. ಭಿಕ್ಷೆ ಹಾಕಿದಾಗ "ತಗೋಳೀ ದೇವರ ಪ್ರಸಾದ "ಎಂದು ಕುಂಕುಮವನ್ನೋ, ಭಂಡಾರವನ್ನೋ ಕೊಡಲು ಬರುವರು. ಅನ್ಯರ ಮನೆಯಲ್ಲಿ ಬೇಡಿಕೊಂಡುಂಬುವ ದೈವಂಗಳು ತಾವು ಏನನ್ನು ಕೊಡಲು ಸಾಧ್ಯ? ಅವನ್ನು ಹೊತ್ತು ತಂದವರೋ ಅಜ್ಞಾನಿಗಳು. ಅವರೇನು ಗುರುಗಳಲ್ಲ, ಮಹಾತ್ಮರಲ್ಲ. ಅವರು ಏನು ಅನುಗ್ರಹ ಕೊಡಬಲ್ಲರು? ಇದನ್ನರಿಯದ ಅಜ್ಞಾನಿ ಜನರು ಪ್ರಸಾದವೆಂದು ಆ ಕುಂಕುಮವನ್ನು, ಭಂಡಾರವನ್ನು ಪಡೆಯುವರು. ಗುರು-ಲಿಂಗ-ಜಂಗಮರ (ಮಹಾತ್ಮರ) ಮೂಲಕ ಪಡೆದುದು ಮಾತ್ರ ಪ್ರಸಾದ. ಯಾರೋ ಒಬ್ಬ ಭಿಕ್ಷುಕ ಬಂದು, "ಯವ್ವಾ, ಎರಡು ರೊಟ್ಟಿ ಕೊಡು; ನಿನಗೆ ಹಸಿವೆ ಆಗದಿರೋ ಔಷಧಿ ಕೊಡ್ತೇನಿ. ಆಗ ಆ ಮನೆಯ ಮಾಲಿಕಳು ರೊಟ್ಟಿ ಕೊಟ್ಟು ಔಷಧಕ್ಕೆ ಕೈಚಾಚಿದಳಂತೆ. ಅಂತಹ ಔಷಧಿ ಕೊಡುವವನು ಏಕೆ ಭಿಕ್ಷೆ ಬೇಡಲು ಬರುತ್ತಾನೆ? ಎಂದು ಆಲೋಚಿಸುವ ಸಾಮಾನ್ಯ ಜ್ಞಾನ ಆ ಮಹಿಳೆಯಲ್ಲಿಲ್ಲ.

(ಮುಂದುವರಿಯುವುದು)

ಪಾಪಿಯ ಧನ ಪ್ರಾಯಶ್ಚಿತ್ತ

ಕಳೆದ ಶರಣ ಮೇಳದಲ್ಲಿ ನಡೆದ ಒಂದು ಪ್ರಸಂಗ. ಬುಕ್ ಸ್ಟಾಲಿನಲ್ಲಿ ಬಹಳ ರಷ್ ಇತ್ತು. ನಮ್ಮ ಊರಿನವರೇ ಆದ ಒಬ್ಬ ಮಹಿಳೆ ಏನೇನೋ ಸಾಮಾನು ಖರೀದಿಸಿದರು. ಸುಮಾರು 250ರೂ ಸಾಮಾನು ಆಯಿತು. ಅಂಗಡಿಯಲ್ಲಿ ಇದ್ದವರನ್ನು ಎಷ್ಟಾಯಿತೆಂದು ಕೇಳಿದರು. ಕೆಲಸದ ಒತ್ತಡದಲ್ಲಿ ಅವರು 100ರೂ ಎಂದರು. ಆಗ ಈಕೆ ಬಹಳ ಖುಷಿಯಿಂದ 150ರೂ ಉಳಿಯಿತೆಂದು ಹರ್ಷಿಸಿ, ನೂರು ರೂ. ಮಾತ್ರ ಕೊಟ್ಟು ಬಂದುಬಿಟ್ಟಳು. ಇದನ್ನು ಕಂಡು ನನಗೆ ತುಂಬಾ ಸಂಕಟವಾಯಿತು. ಸಂಸ್ಥೆಗೆ ಅನ್ಯಾಯವಾಗುತ್ತಿದೆ. ಪೂಜ್ಯ ಮಾತಾಜಿ ಮತ್ತು ಇತರರೆಲ್ಲ ಎಷ್ಟು ಶ್ರಮಪಡುತ್ತಿದ್ದಾರೆ. ಪೂಜ್ಯ ಗಂಗಾಮಾತಾಜಿ ಮತ್ತು ಅವರ ಸಿಬ್ಬಂದಿ ಹಗಲಿರುಳು ಎಷ್ಟು ದುಡಿಯುತ್ತಾರೆ! ಎಂದು ಕಳವಳವಾಯಿತು. ಧರ್ಮಸಂಸ್ಥೆಯ ದುಡ್ಡು ತಿಂದು ಮೋಸ ಮಾಡುತ್ತಿರುವಳಲ್ಲ ಹೇಗೆ ಹೇಳುವುದು? ಎಂದು ಚಟಪಟಿಸಿದೆ.

ನಂತರ ಆಕೆ, ನಾವು ಎಲ್ಲರೂ ಒಂದೇ ಬಸ್ಸು ಹತ್ತಿ ಊರ ಕಡೆಗೆ ಹೊರಟೆವು. ಬಸ್ಸಿನಲ್ಲಿ ಸ್ವಲ್ಪ ದೂರ ಹೋಗುವಷ್ಟರಲ್ಲಿ ಚೆಕ್ಕಿಂಗ್ ಇನ್‌ಸ್ಪೆಕ್ಟರ್ ಬಂದರು. ನಾವೆಲ್ಲ ಟಿಕೆಟ್ ತೋರಿಸಿದೆವು. ಆಕೆ ಟಿಕೆಟನ್ನು ಪರ್ಸಿನಲ್ಲಿ ಹುಡುಕಿದಳು. ತೆಗೆದುಕೊಂಡಿರುವುದಾಗಿಯೂ, ಈಗ ಸಿಗುತ್ತಿಲ್ಲವಾಗಿಯೂ ಹೇಳಿದಳು. ಆತ ಕೇಳಲಿಲ್ಲ; ಟಿಕೆಟ್ಟಿನ ಹಣ ಮತ್ತು ಮೇಲೆ 150ರೂ ಟಿಕೆಟ್ ರಹಿತ ಪ್ರಯಾಣಕ್ಕಾಗಿ ದಂಡ-ಎರಡನ್ನೂ ವಸೂಲಿ ಮಾಡಿದ. ಎರಡೂ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾದ ನನಗೆ ಪಾಪಿಯ ಧನ ಪ್ರಾಯಶ್ಚಿತ್ತಕ್ಕೆ ಎಂಬ ಧರ್ಮಪಿತರ ಮಾತು ನೆನಪಾಯಿತು. ದೇವರ ದುಡ್ಡು ಎಂದೂ ತಿನ್ನಬಾರದು ಎಂಬುದಕ್ಕೆ ಇದು ಉತ್ತಮ ನಿದರ್ಶನವಲ್ಲವೆ?

– ಸುನಿತಾ ಲಿಂಗದೇವ, ಊರು ಬೇಡ

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು; ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು- ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರು ಮನೆಯಲ್ಲಿ ಆಗಾಗ ಸೇರುವುದು ಗೊತ್ತು. ತಾಯಿ -ತಂದೆ, ಅಕ್ಕ -ತಂಗಿ, ಅಣ್ಣ -ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃ ಹೃದಯಿಯಾದ ನನ್ನ ಇಚ್ಛೆಯೂ ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಶರಣ ಮೇಳ ನಿಮಗೆಲ್ಲ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ -ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ, ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲಾ ಅಣ್ಣ ತಮ್ಮಂದಿರಂತೆ; ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ - ಸ್ಥಿತಿ -ಲಯ - ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯ ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲಾ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವೋಪಾಸನೆ ಮುಂತಾದವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣ ವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಠ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನ ದೇವರು- ಧರ್ಮ- ಸಂಸ್ಕಾರದ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೆ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂಬೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣ ಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ, ನೀವು ಸಂಸ್ಕಾರವನ್ನು ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ವ ಸಂಹಿತೆ ಯಾವುದೇ ಒಂದು ಜಾತಿ, ವರ್ಣಕ್ಕೆ ಸೀಮಿತವಾಗದ "ಗಣ ಧರ್ಮ"ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು. ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ

ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಿಂತ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

<u>ಕೌಟುಂಬಿಕ ಪ್ರಾರ್ಥನೆ :</u> ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆವುದಲ್ಲದೆ ಎಲ್ಲರಲ್ಲೂ ಧರ್ಮ ಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆ ಮಂದಿಯೆಲ್ಲ ಕುಳಿತು ಸಂಜೆಯ ಪ್ರಾರ್ಥನೆ -ನೆನಹು ಮಾಡಿರಿ.

<u>ಶರಣ ಸಂಗಮ-ವಾರದ ಪ್ರಾರ್ಥನೆ :</u> ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವ ಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

<u>ನೆನಹು</u> : ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲೇ ಇದ್ದರೂ ಆ ಸ್ಥಳದಲ್ಲಿ 15 ನಿಮಿಷದವರೆಗೆ ಪ್ರಾರ್ಥನೆಯನ್ನು ವೈಯಕ್ತಿಕವಾಗಿ ಆಗಲಿ, ಸಾಮೂಹಿಕವಾಗಿ ಆಗಲಿ, ಅಳವಡಿಸಿಕೊಂಡು ತಪ್ಪದೇ ಮಾಡಿರಿ.

<u>ಗಣ ಮೇಳ</u> : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ವ್ಯಕ್ತಿ ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿ ಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ- ಪೂಜೆ ಮಾಡಿರಿ. ಶಿವರಾತ್ರಿ ಯಂದು ಬೆಳಿಗ್ಗೆ ವಿಶಾಲವಾದ ಮೈದಾನದಲ್ಲಿ ಧರ್ಮಬಾಂಧವರೆಲ್ಲರೂ ಸೇರಿ ಗಣಮೇಳದಲ್ಲಿ ಭಾಗಿಗಳಾಗಿರಿ.

<u>ಶರಣ ಮೇಳ :</u> ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು, ಕುಟುಂಬದವರೆಲ್ಲರು ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. ಗಣಮೇಳವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲಾ ಸೀಮೆದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ 11ರಿಂದ 15ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಐದೂ ದಿವಸಗಳ ಕಾಲ ಭಾಗಿಗಳಾಗಲು ಸಮಯ ಇಲ್ಲದವರು ಜನವರಿ 14ರಂದು

ನಡೆಯುವ ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣದಲ್ಲಿ ಭಾಗಿಗಳಾಗಿ ನಿಮ್ಮ ಅನುಯಾಯಿತ್ವವನ್ನು ಸ್ಥಿರೀಕರಿಸಿರಿ. ಯುವನಾಮ ಸಂವತ್ಸರದ ಮಕರ ಸಂಕ್ರಾಂತಿಯಂದೇ ನನಗೆ ಸಾಕ್ಷಾತ್ಕಾರವಾಗಿ ಇಷ್ಟಲಿಂಗದ ಪರಿಕಲ್ಪನೆ ಹೊಳೆದುದು. ಅಂದೇ ಲಿಂಗಾಯತ ಧರ್ಮವು ಸ್ಥಾಪನೆಗೊಂಡುದು.

ನೀವು ತಪ್ಪದೆ ಭಾಗಿಯಾಗಬೇಕಾದ ಇನ್ನೊಂದು ಸಮಾವೇಶ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ಆಶ್ವಯುಜ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ನಡೆಯುವ ಕಲ್ಯಾಣ ಪರ್ವ. ಮೂರೂ ದಿವಸ ಕಾಲ ಭಾಗವಹಿಸಲು ಆಗದೆ ಇದ್ದವರು ಚತುರ್ದಶಿಯಂದು ನಡೆಯುವ ಶರಣ ವಂದನೆಯಲ್ಲಿ ಭಾಗವಹಿಸಿ 12ನೆಯ ಶತಮಾನದ 770 ಅಮರ ಗಣಂಗಳಿಗೆ ಶರಣು ಶರಣಾರ್ಥಿ ಹೇಳಬೇಕು. ಶರಣ ಮೇಳ ಮತ್ತು ಕಲ್ಯಾಣ ಪರ್ವ -ಇವೆರಡೂ ಕಡ್ಡಾಯ ವಿಧಿಗಳಾಗಲಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ -ಮಧುವಯ್ಯ- ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೇ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು. ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು. ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ಒಗೆತನವ ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ- ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ - ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಲಿರುತ್ತಾಳೆ. ಬನ್ನಿ ನಿಮ್ಮ ಹೃದಯ -ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯ ಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ - ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ ಮಾತಾಜಿ)

ಲಿಂಗಾಯತ ಧರ್ಮ; ಸ್ವತಂತ್ರ ಧರ್ಮ

ಮಾನವನು ಸಂಘಜೀವಿ. ಅದನ್ನೇ ಇಂಗ್ಲೀಷಿನಲ್ಲಿ Man is a Social being ಎನ್ನುತ್ತಾರೆ. ಮಾನವನಿಗೂ ಸಮಾಜಕ್ಕೂ ನಿಕಟವಾದ ಸಂಬಂಧವಿದೆ. ಅದನ್ನು ಬಿಟ್ಟು ಮಾನವ ಬದುಕಲಾರ. ಒಂದು ವೇಳೆ ಬದುಕಿದರೆ ಅದು ಪ್ರಾಣಿಗಳ ಬದುಕಿಗೆ ಸಮಾನವಾಗುತ್ತದೆ. ಮಾನವನ ಮತ್ತು ಸಮಾಜದ ಸಂಬಂಧವು ಬಲಗೊಳ್ಳುತ್ತಾ ಅದು ನಾಗರಿಕತೆಗೆ ಹರಿದು ಬರುತ್ತದೆ. ನಂತರ ನಾಗರಿಕತೆಯಿಂದ ಸಂಸ್ಕೃತಿಗೆ, ಸಂಸ್ಕೃತಿಯಿಂದ ಧರ್ಮಕ್ಕೆ ಧರ್ಮದಿಂದ ದೇವರಿಗೆ ಬಂದು ನಿಲ್ಲುತ್ತದೆ. ಅಂತಹ ನಾಗರಿಕತೆಗಳಲ್ಲಿ ಎರಡು ನಾಗರಿಕತೆಗಳು ವಿಶ್ವದ ಇತಿಹಾಸದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಒಂದು ನೈಲ್ ನದಿಯ ಸಂಸ್ಕೃತಿ. ಇನ್ನೊಂದು ಸಿಂಧು ನದಿಯ ಸಂಸ್ಕೃತಿ. ಇದರಲ್ಲಿ ನಮಗೆ ಸಿಂಧು ನದಿಯ ಸಂಸ್ಕೃತಿ ಹೆಚ್ಚು ನಿಕಟವಾದದ್ದು ಮತ್ತು ಒಳ್ಳೆಯ ಪ್ರಭಾವ ಬೀರಿದ್ದು. ಇದನ್ನು ಇಂಗ್ಲೀಷಿನಲ್ಲಿ Indus valley civilization ಅನ್ನುತ್ತಾರೆ. ಸಿಂಧು ನದಿಯ ದಡದಲ್ಲಿ ಹರಪ್ಪ - ಮೊಹೆಂಜೋದಾರೋಗಳು ಬರುತ್ತವೆ. ಈ ಪ್ರದೇಶವು ಈಗಿನ ಪಾಕಿಸ್ತಾನದ ಸಿಂಧ ಪ್ರದೇಶದಲ್ಲಿ ಬರುತ್ತದೆ. ಇದಕ್ಕೆ ಹರಪ್ಪ -ಮೊಹೆಂಜೋದಾರೊ ಸಂಸ್ಕೃತಿ ಎಂತಲೂ ಅನ್ನಬಹುದು. ಇದು ಹತ್ತು ಸಾವಿರ ವರುಷಗಳಷ್ಟು ಹಳೆಯದೆಂದು ಇತಿಹಾಸ ತಜ್ಞರ ಅಭಿಪ್ರಾಯ. ಇಲ್ಲಿ ಬರುವ ಪಶುಪತಿ ಒಬ್ಬ ಮಹಾ ತಪಸ್ವಿ ಮತ್ತು ಯೋಗಿಪುರುಷ. ಇವನೇ ನಂತರ ಯೋಗಿ ಪುರುಷ ಶಿವನಾಗುತ್ತಾನೆ.

ನಿರಾಕಾರವಾದ ಮತ್ತು ಅದೃಶ್ಯವಾದ ದೇವರನ್ನು ಮಾನವರಿಗೆ ತಿಳಿಸಲು ಪಂಚಭೂತಗಳಾದ ಅಗ್ನಿ, ಜಲ, ವಾಯು, ಆಕಾಶ ಮತ್ತು ಭೂಮಿ ಇವುಗಳನ್ನು ಯೋಗಿ ಪುರುಷ ಶಿವನಿಗೆ ಅಳವಡಿಸಿ ಅಗ್ನಿಯನ್ನು ಮೂರನೇ ಕಣ್ಣಾಗಿ ಅವನ ಹಣೆಯಲ್ಲಿ, ಜಲವನ್ನು ಗಂಗೆಯಾಗಿ ಅವನ ಜಡೆಯಲ್ಲಿ, ವಾಯುವನ್ನು ಸರ್ಪರೂಪದಲ್ಲಿ ಅವನ ಕೊರಳಲ್ಲಿ, ಆಕಾಶವನ್ನು ನೀಲಿ ಬಣ್ಣಕ್ಕೆ ಪರಿವರ್ತಿಸಿ ಅವನ ಮೈಬಣ್ಣವನ್ನಾಗಿ, ಭೂಮಿಯನ್ನು ಅವನ ಮಡದಿಯಾಗಿ ಅವನ ತೊಡೆಯ ಮೇಲೆ ಇರಿಸಿ ದೇವತಾ ಶಿವನನ್ನಾಗಿ ಮಾಡಿ ಪೂಜಿಸತೊಡಗುತ್ತಾರೆ. "ಯೋಗಿ ಪುರುಷ ಶಿವ" ದ್ರಾವಿಡ ಮೂಲಿಗ. ದಾಕ್ಷಾಯಿಣಿಯ ತಂದೆ ದಕ್ಷಬ್ರಹ್ಮ ಆರ್ಯನು. ದಕ್ಷಬ್ರಹ್ಮನು ಶಿವನ ಮಹಾ ಯೋಗಿತ್ವವನ್ನು ಮೆಚ್ಚಿ ತನ್ನ ಮಗಳಾದ ದಾಕ್ಷಾಯಿಣಿಯನ್ನು ಈ ಶಿವನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಇದೇ "ದ್ರಾವಿಡ ಮತ್ತು ಆರ್ಯರ ಮಿಲನ."

ಇಂತಹ ಸ್ವಾರಸ್ಯಕರ ಘಟನೆಯು ಕಾಲಗರ್ಭದಲ್ಲಿ ಬೆರೆತು ಪುರಾಣವಾಗಿರಲು ಸಾಧ್ಯ. ಈ ಯೋಗಿ ಪುರುಷನ ನಂತರ ವೇದಶಾಸ್ತ್ರವು ಬರುವದು. ಶಿವನಿಂದ ಶಿವಧರ್ಮ, ಬುದ್ಧನಿಂದ ಬೌದ್ಧಧರ್ಮ, ಜಿನನಿಂದ ಜೈನಧರ್ಮ ಹೀಗೆ ಕವಲೊಡೆಯುತ್ತವೆ. ವೇದಶಾಸ್ತ್ರದಿಂದ ವೈದಿಕ ಧರ್ಮ ಹುಟ್ಟಿಕೊಳ್ಳುತ್ತದೆ. ಹಾಗೇನೆ ನೈಲ್ ನದಿಯ ಸಂಸ್ಕೃತಿಯಿಂದ ಕ್ರೈಸ್ತ ಮತ್ತು ಮಹಮ್ಮದಿಯ ಧರ್ಮಗಳು ಹುಟ್ಟಿಕೊಂಡವು ಎನ್ನಬಹುದು.

ಈ ಭೂ ಖಂಡಕ್ಕೆ ಬಂದ ಮುಸಲ್ಮಾನರು ಸಿಂಧೂ ನದಿಯ ದಕ್ಷಿಣಕ್ಕೆ ಇರುವ ಭೂಪ್ರದೇಶಕ್ಕೆ ಹಿಂದ್ ಅಂತಾ ಕರೆಯುತ್ತಾರೆ. ನಂತರ ಅದು ಹಿಂದುಸ್ಥಾನವಾಯಿತು. ಹಿಂದೂ

ಅನ್ನುವುದು ಧರ್ಮಕ್ಕೆ ಸಂಬಂಧಪಡದೇ ಕೇವಲ ಪ್ರದೇಶಕ್ಕೆ ಬಳಸುವ ವಾಚಕ ಶಬ್ದವಾಗಿತ್ತು. ವೈದಿಕ ಧರ್ಮವು ತನ್ನ ನ್ಯೂನತೆಗಳಿಂದ ಕಮರಿ ಹೋಗುವ ಸಂದರ್ಭದಲ್ಲಿ ಮನುಸ್ಮೃತಿಯ "ಚತುರ್‌ವರ್ಣ"ವನ್ನು ಆಧಾರವಾಗಿಟ್ಟುಕೊಂಡು ಸಮಾಜವನ್ನು ಹೀಗೆ ವರ್ಗೀಕರಿಸುತ್ತಾರೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರೆಂದು, ವೈದಿಕರೆಂದು ತಮ್ಮನ್ನು ಬ್ರಾಹ್ಮಣರೆಂದು ಕರೆದು ಮೊದಲನೇ ಸ್ಥಾನದಲ್ಲಿ, ದೇಶವನ್ನು ರಕ್ಷಿಸುವ ಜನರ ವರ್ಗವನ್ನು ಕ್ಷತ್ರಿಯ ಎಂಬುದಾಗಿ ಮಾಡಿ ಎರಡನೇ ಸ್ಥಾನದಲ್ಲಿ, ವ್ಯಾಪಾರ ವಹಿವಾಟುಗಳನ್ನು ಮಾಡುವ ಜನರನ್ನು ವೈಶ್ಯರನ್ನಾಗಿಸಿ ಮೂರನೇ ಸ್ಥಾನದಲ್ಲಿ ಮತ್ತು ಒಕ್ಕಲುತನ ಮಾಡಿ ದವಸಧಾನ್ಯಗಳನ್ನು ಬೆಳೆದು ಈ ಮೇಲಿನ ವರ್ಗದವರನ್ನು ಪೋಷಣೆ ಮಡುವವರನ್ನು ಕೊನೆಯದಾದ ನಾಲ್ಕನೆಯ ಸ್ಥಾನದಲ್ಲಿ ಇಟ್ಟು ವೈದಿಕ ಧರ್ಮಕ್ಕೆ ಹಿಂದೂ ಎಂಬ ಶಬ್ದದ ಲೇಪನಮಾಡಿ ಹಿಂದೂ ಧರ್ಮವೆಂದು ನಾಮಕರಣ ಮಾಡುತ್ತಾರೆ.

ಮೇಲಿನ ಮೂರು ವರ್ಗದ ಜನರಿಗೆ ಅಂದರೆ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಜನಿವಾರ ಮತ್ತು ಉಡದಾರಗಳನ್ನು ಪ್ರಾಪ್ತಿ ಮಾಡಿ ದೇವರನ್ನು ಪೂಜಿಸುವ ಅವಕಾಶವನ್ನು ನೀಡುತ್ತಾರೆ. ನಾಲ್ಕನೇ ಸ್ಥಾನದಲ್ಲಿರುವ ಶೂದ್ರರಿಗೆ ಬರೀ ಉಡದಾರ ಪ್ರಾಪ್ತಿ ಮಾಡುತ್ತಾರೆ. ಹೀಗೆ ವರ್ಗೀಕರಣ ನಡೆದು ಕೆಳವರ್ಗದ ಜನರ ಶೋಷಣೆ, ಅವರ ಮೇಲೆ ದಬ್ಬಾಳಿಕೆ ನಡೆದು ಅಸಮಾನತೆಗೆ ಕಾರಣವಾಗುತ್ತದೆ. ಈ ಅಸಮಾನತೆಯನ್ನು ತೊಡೆದು ಹಾಕಲು ಹನ್ನೆರಡನೆ ಶತಮಾನದಲ್ಲಿ ಬಸವಣ್ಣನವರು ಕೆಳವರ್ಗದ ಶೋಷಿತ ಶೂದ್ರ ಮತ್ತು ದಲಿತ (ಪಂಚಮ ವರ್ಣೀಯ)ರಿಗೆ ಇಷ್ಟಲಿಂಗ ಮತ್ತು ಶಿವದಾರಗಳನ್ನು ಪ್ರಾಪ್ತಿ ಮಾಡಿ ದೇವರನ್ನು ಪೂಜಿಸುವ ಅವಕಾಶವನ್ನು ಕಲ್ಪಿಸುತ್ತಾರೆ ಮತ್ತು ಎಲ್ಲರೂ ಸರಿಸಮಾನರು ಎಂದು ಸಾರುವ ಹೊಸ ಧರ್ಮವನ್ನು ಹುಟ್ಟು ಹಾಕುತ್ತಾರೆ. ಅದುವೇ 'ಲಿಂಗಾಯತ ಧರ್ಮ.' ಅದನ್ನು 'ಬಸವ ಧರ್ಮ' ಅಥವಾ 'ಶರಣ ಧರ್ಮ' ಎಂತಲೂ ಕರೆಯಬಹುದು. ಬಸವವಾದವನ್ನು ಒಪ್ಪಿಕೊಂಡ ಮೇಲಿನ ವರ್ಗದ ಜನರೂ 'ಲಿಂಗಾಯತ ಧರ್ಮ'ಕ್ಕೆ ಸೇರಿಕೊಂಡಿರಲು ಸಾಧ್ಯ.

ಮನು ಸ್ಮೃತಿಯ ಇನ್ನೊಂದು ಕರಾಳ ಛಾಯೆ ಎಂದರೆ ಕರ್ಮವಾದ. ಕರ್ಮವಾದದ ಸಾರಾಂಶವೆಂದರೇ ನಿನ್ನ ಬದುಕಿನಲ್ಲಿ ಬರುವ ಜಾತಿ, ಸಿರಿತನ, ಬಡತನ, ಮಾನ, ಅಪಮಾನ, ದೌರ್ಜನ್ಯ, ಅತ್ಯಾಚಾರ ದಬ್ಬಾಳಿಕೆಗಳೆಲ್ಲವೂ ಪೂರ್ವನಿರ್ಧಾರಿತ. ನಿನ್ನ ಕೈಯಲ್ಲಿ ಯಾವುದೂ ಇಲ್ಲ. ನೀನು ಯಾರನ್ನೂ ದೂಷಿಸುವ ಹಾಗಿಲ್ಲ. ಅದು ನಿನ್ನ ಕರ್ಮ(ಹಣೆಬರಹ) ಎಂದು ಹೇಳುವ ಸಂಸ್ಕೃತಿ. ಇಂಥ ಕರ್ಮವಾದದ ವಿರುದ್ಧ ಬಂಡೆದ್ದ ಹನ್ನೆರಡನೇ ಶತಮಾನದ ಮಾನವತಾವಾದಿ ಶಿವಶರಣ ವಿಶ್ವಗುರು ಬಸವಣ್ಣನವರದು ಕಾಯಕವಾದ.

ಇದನ್ನೇ ಕಾಯಕವೇ ಕೈಲಾಸವೆಂದರು. ಅವರ ದೃಷ್ಟಿಯಲ್ಲಿ ಕಾಯಕ ಮತ್ತು ಕರ್ಮಗಳಲ್ಲಿ -ಅಪಾರ ವ್ಯತ್ಯಾಸವಿದೆ. ಕಾಯಕ ಸಿದ್ಧಾಂತವು ಚೈತನ್ಯದ ಪ್ರತೀಕವಾದರೆ ಕರ್ಮವು ಜಡತ್ವದ ಪ್ರತೀಕವಾಗುತ್ತದೆ. ಕಾಯಕವಾದ ಜನಪರವಾದರೆ ಕರ್ಮವಾದ ದಾಸ್ಯಪರವಾಗುತ್ತದೆ. ಈ ಕರ್ಮ ಪಾಪವನ್ನು ಕಳೆಯಲು ಅವರು ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ಪಂಡಿತನಾಗಲಿ, ಮೂರ್ಖನಾಗಲಿ
ಸಂಚಿತಕರ್ಮ ಉಂಡಲ್ಲದೆ ಬಿಡದು
ಪ್ರಾರಬ್ಧಕರ್ಮ ಭೋಗಿಸಿದಲ್ಲದೆ ಹೋಗದೆಂದು
ಶ್ರುತಿ ಸಾರುತ್ತೈದಾವೆ ನೋಡಾ.
ತಾನಾವಾವ ಲೋಕದೊಳಗಿದ್ದಡೆಯೂ ಬಿಡದು;
ಕರ್ಮಫಲಗೂಡಿ ಲಿಂಗದೇವಂಗೆ
ಆತ್ಮನೈವೇದ್ಯವ ಮಾಡಿದವನೇ ಧನ್ಯ.

ಕೂಡಲ ಸಂಗಮದೇವ, ಶಾಸ್ತ್ರ ಸಂಪ್ರದಾಯ ರಕ್ಷಿಸುವ ದೇವರಾಗಿ ಬರದೇ ಮನುಕುಲವನ್ನು ಕರ್ಮಕೂಪದಿಂದೆ ಎತ್ತುವ ಶಕ್ತಿಯಾಗಿ, ಮನೋಸ್ಥೈರ್ಯದ ಸಾಧನವಾಗಿ ಬರುತ್ತಾನೆ. ಕರ್ಮಫಲಗಳೊಂದಿಗೆ ಲಿಂಗದೇವನಿಗೆ ಆತ್ಮನೈವೇದ್ಯ ಮಾಡುವುದರ ಮೂಲಕ ಜಡವಾದ ಶಾಸ್ತ್ರದಾಸ್ಯ ಸಂಸ್ಕೃತಿಯ (ಕರ್ಮವಾದದ) ಮಾನಸಿಕ ಗುಲಾಮಗಿರಿಯಿಂದ ಹೊರಬರಲು ದಾರಿ ತೋರಿಸುತ್ತಾರೆ ಬಸವಣ್ಣನವರು.

ಕಲ್ಯಾಣ ಕ್ರಾಂತಿಯ ನಂತರ ಮತ್ತು ಬಸವಣ್ಣನವರು ಐಕ್ಯವಾದ ಮೇಲೆ ಕೆಲವು ಹಾನಿಕಾರಕ ತಿರುವುಗಳು ಹುಟ್ಟಿಕೊಳ್ಳುತ್ತವೆ. ಅವುಗಳೇನೆಂದರೆ ಕನ್ನಡದ ಕವಿಗಳಾದ ಹರಿಹರ, ರಾಘವಾಂಕ, ಚಾಮರಸ ಮತ್ತು ಭೀಮಕವಿಗಳು ಬಸವಣ್ಣನವರನ್ನು ಅತಿಯಾಗಿ ಹೊಗಳಿ ವೈಭವೀಕರಿಸುತ್ತಾರೆ. ತೆಲುಗಿನ ಪಾಲ್ಕುರಿಕೆ ಸೋಮನಾಥರಂತೂ ಬಸವ ಪುರಾಣವನ್ನು ಬರೆದು ಒಬ್ಬ ಪ್ರಗತಿಶೀಲ ಐತಿಹಾಸಿಕ ಪುರುಷನನ್ನು ಪುರಾಣ ಪುರುಷನನ್ನಾಗಿಸಿ ಮತ್ತೆ ಹಿಂದುತ್ವಕ್ಕೆ ಕರೆದೊಯ್ದು ಅವರ ಬಸವವಾದ ಮತ್ತು ಅವರು ಸ್ಥಾಪಿಸಿದ ಲಿಂಗಾಯತ ಧರ್ಮಗಳನ್ನು ಹಿಂದೂ ಧರ್ಮದ ಚೌಕಟ್ಟಿನ ಶೂದ್ರರ ಸ್ಥಾನದಲ್ಲಿ ಲಿಂಗಾಯತ ಜಾತಿಯನ್ನಾಗಿ ಸೇರಿಸಿ ಹುನ್ನಾರ ಮಾಡಿದ್ದಾರೆಂದರೆ ತಪ್ಪಾಗಲಾರದು.

ವೇದ ಉಪನಿಷತ್ತುಗಳಲ್ಲಿ ಹಿಂದೂ ಎಂಬ ಪದಗಳ ಬಳಕೆಯಾಗಿಲ್ಲ. ನಾವುಗಳು ಹಿಂದುಗಳು ಎಂದು ಹೇಳಿಕೊಳ್ಳುವ ಅಭಿಮಾನವೂ ಉಳಿದಿಲ್ಲ. ಆದ್ದರಿಂದ ನಾವುಗಳು ಹಿಂದೂ-ಲಿಂಗಾಯತರು ಅಲ್ಲ, ವೀರಶೈವ-ಲಿಂಗಾಯತರೂ ಅಲ್ಲ. (ವೀರಶೈವ ಅನ್ನುವ ಪದವು ಹಿಂದೂ ಧರ್ಮಕ್ಕೆ ಸಂಬಂಧವನ್ನು ಕಲ್ಪಿಸುತ್ತದೆ). ಆದಕಾರಣ ನಾವು ಲಿಂಗಾಯತ -ಲಿಂಗಾಯತರು ಎಂದು ಹೇಳಿಕೊಳ್ಳೋಣ ಮತ್ತು ವಿಶ್ವಗುರು ಬಸವಣ್ಣನವರು ಹಾಕಿಕೊಟ್ಟ ಲಿಂಗಾಯತ ಧರ್ಮವನ್ನು ಮರುಸ್ಥಾಪನೆ ಮಾಡೋಣ.

- ಸದಾನಂದ ಹತ್ತಾಳ, ಬೆಂಗಳೂರು

ಸ್ವಯಂ ಸೇವಕರಿಗೆ ಕರೆ

ಶರಣ ಮೇಳ ಬೃಹತ್ ಸಮಾವೇಶ. ಎಷ್ಟು ಜನ ಕಾರ್ಯಕರ್ತರಿದ್ದರೂ ಕಡಿಮೆಯೆ. ಶರಣ ಬಂಧುಗಳು ಈ ಪವಿತ್ರ ಸಮಾವೇಶದಲ್ಲಿ ಸೇವೆ ಮಾಡಬೇಕೆಂದು ಜನವರಿ ಮೊದಲನೆಯ ವಾರದಲ್ಲಿ ಬರುವ ಮನಸ್ಸು ಮಾಡಬೇಕು. ಶರಣ ಮೇಳದ ಸಮಯದಲ್ಲಿ ದಾಸೋಹ ಮಂಟಪ, ಪಾಕ ಗೃಹ, ಸಭಾ ಮಂಟಪದಲ್ಲಿ ಸೇವೆ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರಬೇಕೆಂದು ಆಶಿಸುವೆವು. ದೇಣಿಗೆ ಸಂಗ್ರಹಕ್ಕೆ ರಸೀತಿ ಪುಸ್ತಕ ಬಂದಿಲ್ಲದಿದ್ದರೆ ದೂರವಾಣಿ ಮೂಲಕ ಸಂಪರ್ಕಿಸಿ, ರಸೀತಿ ಪುಸ್ತಕ ತರಿಸಿಕೊಂಡು, ದೇಣಿಗೆ ಸಂಗ್ರಹಿಸಿಕೊಂಡು ಬರಬೇಕು.

ರಾಷ್ಟ್ರೀಯ ಬಸವ ದಳ
ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ ಕರ್ನಾಟಕ ರಾಜ್ಯ
ಧರ್ಮಜಾಗೃತಿ

- ಸು.ಮಲ್ಲಿಕಾರ್ಜುನಪ್ಪ, ಕೊಳ್ಳೇಗಾಲ

ಬಸವ ಸ್ಮರಣಪೂರ್ವಕ ಶರಣು ಶರಣಾರ್ಥಿಗಳು. ಸಮಾಜದ ಹಿತದೃಷ್ಟಿಯಿಂದ ಈ ಪತ್ರ. ದೇಶದಲ್ಲಿ 4000 ಮಠಗಳು, ಕರ್ನಾಟಕದಲ್ಲಿ 2000 ಮಠಗಳು, ಮಠಗಳು ಪ್ರಭಾವಶಾಲಿ ಸಂಸ್ಥೆಗಳು. ಮಠಾಧಿಪತಿಗಳು ಲಿಂಗಾಯತ ಸಮಾಜಕ್ಕೆ ಕಳಶಪ್ರಾಯರು, ಅನ್ನದಾನ, ವಿದ್ಯಾದಾನದಲ್ಲಿ ಅಗ್ರಗಣ್ಯರು, ಜ್ಞಾನದಾನ ಮಾಡುವುದು ಬಂಗಾರಕ್ಕೆ ಕುಂದಣವಿಟ್ಟಂತೆ. ಲಿಂಗಾಯತ ಸಮಾಜದಲ್ಲಿ ಮಠಮಾನ್ಯರು, ಧರ್ಮಬೋಧಕರು, ರಾಜಕಾರಣಿಗಳು, ಮೇಧಾವಿಗಳು, ಕವಿಗಳು, ಕೈಗಾರಿಕೋದ್ಯಮಿಗಳು, ಸಾವಿರಗಟ್ಟಲೆ ಧರ್ಮೋತ್ಸಾಹಿಗಳು, ಹತ್ತಾರು ಸಾವಿರ ಶ್ರೀಮಂತರು, ಲಕ್ಷಾಂತರ ಭಕ್ತರು ಇದ್ದಾರೆ. ಲಿಂಗಾಯತರು ಕರ್ನಾಟಕದಲ್ಲಿ ಒಂದೂವರೆ ಕೋಟಿ, ಮಹಾರಾಷ್ಟ್ರದಲ್ಲಿ 70 ಲಕ್ಷ, ಆಂಧ್ರಪ್ರದಶದಲ್ಲಿ 60 ಲಕ್ಷ, ತಮಿಳು ನಾಡಿನಲ್ಲಿ 50 ಲಕ್ಷ, ಕೇರಳದಲ್ಲಿ 30 ಲಕ್ಷ, ಭಾರತದಲ್ಲಿ ಇಕ್ಕೆಲಗಳಲ್ಲಿ ಚದುರಿದಂತೆ ಅನೇಕ ಲಕ್ಷ, ಒಟ್ಟು ಭಾರತದಲ್ಲಿ 4 ಕೋಟಿ ಲಿಂಗವಂತರು. ಅಮೇರಿಕ, ಇಂಗ್ಲೆಂಡ್, ಕೆನಡ, ಫ್ರಾನ್ಸ್, ಜರ್ಮನಿ, ನೆದರ್‌ಲ್ಯಾಂಡ್, ಇಟಲಿ, ಹಾಲೆಂಡ್, ನೇಪಾಳ ಮುಂತಾದ ಕಡೆಗಳಲ್ಲಿ ಲಿಂಗಾಯತರಿದ್ದಾರೆ. ಇಂಥ ಲಿಂಗವಂತ ಸಮಾಜದ ಸೌಭಾಗ್ಯಕ್ಕೆ ಎಣೆಯುಂಟೆ?

ಲಿಂಗಾಯತ ಧರ್ಮಾಡಳಿತ, ಧರ್ಮಪ್ರಸಾರ, ಧರ್ಮದೀಕ್ಷೆ, ಧರ್ಮಜಾಗೃತಿ, ಧರ್ಮರಕ್ಷಣೆ, ಧರ್ಮಸಂಘಟನೆ, ಸಮಾಜಕ್ಕೆ ಅನ್ಯಾಯವಾದಾಗ ಪ್ರತಿಭಟಿಸುವುದು ನಮ್ಮೆಲ್ಲರ ಮೂಲ ಕರ್ತವ್ಯ. ಲಿಂಗಾಯತ ಧರ್ಮವನ್ನು ಶುದ್ಧೀಕರಿಸಿ, ಜಗತ್ತಿನ ಪ್ರಮುಖ ಧರ್ಮಗಳ ಅಗ್ರಪಂಕ್ತಿಗೆ ಸೇರಿಸಿ, ಕೇಂದ್ರ ಸರ್ಕಾರದಿಂದ ಲಿಂಗಾಯತ ಧರ್ಮಕ್ಕೆ ಜನಗಣತಿಯಲ್ಲಿ ಸಂಕೇತಾಕ್ಷರಸಹಿತ ಪ್ರತ್ಯೇಕ ಅಂಕಣ ಮತ್ತು ಸ್ವತಂತ್ರ ಧರ್ಮದ ಸಂವಿಧಾನಾತ್ಮಕ ಮಾನ್ಯತೆ ಹಾಗೂ ಲಿಂಗಾಯತರಿಗೆ ಅಲ್ಪಸಂಖ್ಯಾತರ ಸ್ಥಾನಮಾನ ಸೌಲಭ್ಯಗಳನ್ನು ಪಡೆಯಬೇಕಾಗಿದೆ. ಗುರು ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಿಸಿ, ಅದರ ತತ್ವಗಳನ್ನು ವಚನಗಳ ಮೂಲಕ ಬರೆದಿರುವರು. ಮಲೆಯ ಮಾದೇಶ್ವರರು, ಯಡಿಯೂರು ಸಿದ್ಧಲಿಂಗೇಶ್ವರರು, ಸುತ್ತೂರು ಘನಲಿಂಗದೇವರು, ದೇವನೂರು ಗುರುಮಲ್ಲೇಶ್ವರರು ಲಿಂಗಾಯತ ಧರ್ಮವನ್ನು ಪುನರುದ್ಧಾರ ಮಾಡಿದ್ದಾರೆ. ಲಿಂಗಾಯತರು ತಮ್ಮ ದೇಹವನ್ನೇ ದೇವಾಲಯ ಮಾಡಿ, ಕೊರಳಲ್ಲಿ ಇಷ್ಟಲಿಂಗ ಧರಿಸಿ, ಅಂಗೈಯಲ್ಲಿ ಪೂಜಿಸಿ, ಪಾದೋದಕ ಪ್ರಸಾದ ಸ್ವೀಕರಿಸಿ, ಅನ್ಯ ದೇವತೆಗಳನ್ನು ಪೂಜಿಸದೆ ದೇವಸ್ವರೂಪಿಗಳಾದ ಗುರುಲಿಂಗಜಂಗಮರನ್ನು ಮಾತ್ರ ಪೂಜಿಸಬೇಕೆಂಬುದು ನಮ್ಮ ಧರ್ಮ ತತ್ವ.

ಇಂದು ಕರ್ನಾಟಕ ರಾಜ್ಯವೇ ಲಿಂಗಾಯತಮಯ ಆಗಬೇಕಿತ್ತು, ಆದರೆ ಲಿಂಗಾಯತ ಸಮಾಜವೇ ಶೈವೀಕರಣ, ಗಣಪತೀಕರಣ, ಪುರಾಣೀಕರಣ, ವೈದಿಕೀಕರಣಗೊಂಡು, ತನ್ನ ಸ್ವತಂತ್ರ ಆಚರಣೆ ಅಸ್ತಿತ್ವವನ್ನೇ ಕಳೆದುಕೊಳ್ಳುವಂತಿದೆ. ಇದು ತನ್ನ ರೋಗನಿರೋಧಕ ಶಕ್ತಿಯನ್ನು ಕಳೆದುಕೊಂಡು, ಬೇಲಿ, ಕಾವಲು ಎರಡೂ ಇಲ್ಲದ ಸರ್ಕಾರಿ ಗೋಮಾಳದಂತಿದೆ. ಗುರು ಬಸವಣ್ಣನವರ ಆಶಯದಂತೆ ಒಂದು ಕೇಂದ್ರಬಿಂದುವಿನ ಸುತ್ತ ಹಬ್ಬದೆ ಮೇಟಿಗೂಟ ಕಿತ್ತ ಕಣದಂತೆ, ದಾರ ಕಿತ್ತ ಮಣಿಸರದಂತೆ, ಸೂತ್ರ ಕಿತ್ತ ಪಟದಂತೆ ಇದರಲ್ಲಿ ಸಂಘಟನೆಯೇ ಇಲ್ಲ. ಹಿಂದೂ ಸಂಸ್ಕೃತಿಯ ಸಮುದ್ರದಲ್ಲಿ ಕರಗಿಹೋಗುವ ದ್ವೀಪದಂತಿದೆ ಲಿಂಗಾಯತ ಸಮಾಜ ಎಂದು ಓರ್ವ ಪಾಶ್ಚಿಮಾತ್ಯ ವಿದ್ವಾಂಸ

ಹೇಳಿರುವುದು ಕಟುಸತ್ಯವಾಗಿದೆ ಎಂದು ಮಾರ್ಚ 2009 ಕಲ್ಯಾಣ ಕಿರಣ ಪತ್ರಿಕೆಯ ಸಂಪಾದಕೀಯದಲ್ಲಿ ಬರೆದಿರುವುದು ಸಂದರ್ಭೋಚಿತವಾಗಿದೆ. ಲಿಂಗಾಯತ ಧರ್ಮಾಡಳಿತ, ಬಸವ ತತ್ವ ತರಬೇತಿ, ಮಾರ್ಗದರ್ಶನ ವ್ಯವಸ್ಥೆಗಳಿಲ್ಲದೆ ಅಸೂಯೆ, ಸಂಕುಚಿತ ಭಾವನೆ, ಮೂಢನಂಬಿಕೆ, ಒಳಪಂಗಡ ಭೇದಗಳಿಂದಲೂ, ಆದರ್ಶ ವ್ಯಕ್ತಿಗಳ ಹಾಗೂ ಧರ್ಮ ಪ್ರಚಾರದ ಕೊರತೆಗಳಿಂದಲೂ, ಇಂದು ಕರ್ನಾಟಕದ ಬಹುದೊಡ್ಡ ಲಿಂಗಾಯತ ಸಮಾಜ ಮಂಕಾಗಿದೆ. ಜಗತ್ತನ್ನೇ ಎಚ್ಚರಿಸಬಲ್ಲ ಭವ್ಯ ಪರಂಪರೆ ಹೊಂದಿದ ಲಿಂಗಾಯತ ಸಮಾಜ ಧಾರ್ಮಿಕ, ಸಾಮಾಜಿಕ, ರಾಜಕೀಯವಾಗಿಯೂ ತನ್ನ ಸಮಗ್ರ ಸಂಘಟನೆ ಕಳೆದುಕೊಂಡು ನಿಸ್ಸತ್ವಗೊಂಡಿದೆ.

ಶರಣಬಂಧುಗಳೇ, ಕಾಶಿಯಲ್ಲಿ ವಿದ್ಯೆ ಕಲಿಸಿ ಮುಂದೆ ಮಠಾಧೀಶರಾಗುವವರಿಗೆ ಮೂಲದಲ್ಲಿಯೇ ಗುರುಕುಲಗಳಲ್ಲಿ ವೇದ, ಆಗಮ, ಸಂಸ್ಕೃತ, ವೈದಿಕ, ಶೈವ ವ್ಯವಹಾರಗಳನ್ನು ಬೋಧಿಸಿ ತರಬೇತಿ ಕೊಟ್ಟು ಕಳಿಸುತ್ತಿರುವುದರಿಂದ, ಅವರು ಮಠಾಧೀಶರಾದ ಮೇಲೆ ಲಿಂಗಧಾರಣೆ, ಮದುವೆ, ನಾಮಕರಣ ಮುಂತಾದ ಶುಭಕಾರ್ಯಗಳಲ್ಲಿ ಹೋಮಹವನ, ಗೃಹಪ್ರವೇಶದಲ್ಲಿ ಗೋವು ನುಗ್ಗಿಸುವುದು ಇತ್ಯಾದಿಯಾಗಿ ವೈದಿಕ ರೀತಿಯಲ್ಲಿಯೇ ಕಾರ್ಯಗಳನ್ನು ಮಾಡುತ್ತಿರುವುದರಿಂದ, ವೈದಿಕ ಆಚರಣೆಗಳೇ ಲಿಂಗಾಯತ ಆಚರಣೆಗಳಾಗಿ ಸಮಾಜ ದಾರಿತಪ್ಪಿದೆ. ಬೇಲಿಯೇ ಎದ್ದು ಹೊಲ ಮೇಯುವಂತೆ, ಲಿಂಗಾಯತ ತತ್ವಗಳನ್ನು ಪ್ರಚಾರವಾಗದಂತೆ ಮರೆಮಾಚಿ, ಜನರನ್ನು ಅಜ್ಞಾನದಲ್ಲಿಟ್ಟು, ಏಕದೇವೋಪಾಸನೆಯನ್ನು ಮುಚ್ಚಿಟ್ಟು, ಬಹುದೇವತೋಪಾಸನೆಯನ್ನು ಮಾಡುತ್ತಿರುವುದರಿಂದ ಸಮಾಜ ನಶಿಸಿದೆ. ನಮ್ಮ ಧರ್ಮ ರಕ್ಷಿಸಬೇಕಾದವರೇ ಮೂಲದಲ್ಲಿಯೇ ನಮ್ಮ ಧರ್ಮಕ್ಕೆ ಸಂಬಂಧಿಸದ ಗಣಪತಿಪೂಜೆ, ದೇವಸ್ಥಾನ ಸಂಪ್ರೋಕ್ಷಣೆ ವೈದಿಕ ಆಚರಣೆಗಳನ್ನು ಬಿತ್ತನೆ ಮಾಡುತ್ತಿರುವುದರಿಂದ ಕೆಲವು ಲಿಂಗಾಯತರು ಬ್ರಹ್ಮಕುಮಾರಿ ಸಮಾಜ ಸೇರಿದರೆ, ಇನ್ನು ಕೆಲವರು ಅಯ್ಯಪ್ಪಸ್ವಾಮಿಗೆ ಹೋದರೆ, ಹಲವರು ಮಾರಿಮಸಣಿ, ತಿಮ್ಮಪ್ಪ, ಗಣಪತಿ, ಆಂಜನೇಯ, ಮಂಜುನಾಥನಿಗೂ ಹೋಗುವರು. ಗೌರಿ, ಸರಸ್ವತಿ, ಲಕ್ಷ್ಮಿ, ಮಾರಿ, ದೇವಿ ಮುಂತಾದ ವೈದಿಕ ಮೂಲದ ಆಚರಣೆಗಳನ್ನೂ ಮಾಡುವರು. ಇತ್ತೀಚೆಗೆ ಆಧುನಿಕತೆಯ ನೆಪದಲ್ಲಿ ಮಕ್ಕಳ ಮೇಲೆ ತಂದೆತಾಯಿಗಳ ಹಿಡಿತ ತಪ್ಪುತ್ತಿರುವುದು, ಕಲವರು ಕುಡಿಯುವುದು, ಮೊಟ್ಟೆ ಮಾಂಸ ತಿನ್ನುವುದು ಆತಂಕಕಾರಿ. ಹೀಗಾಗಿ ನಮ್ಮ ಆಚಾರವಿಚಾರಗಳೆಲ್ಲ ತೀರ ಹದಗೆಟ್ಟಿವೆ. ಇದಕ್ಕೆಲ್ಲ ನಮ್ಮ ಧರ್ಮ ತತ್ವಗಳ ಅರಿವು ಇಲ್ಲದಿರುವುದೇ ಕಾರಣ. ನಮ್ಮ ಧರ್ಮದ ಮೂಲಭೂತ ತತ್ವಗಳನ್ನು ತಿಳಿಯದೆ, ತಿಳಿದಿದ್ದರೂ ಒಪ್ಪದೆ ಇರುವುದರಿಂದ ನಮ್ಮ ಧರ್ಮ ಸಂಸ್ಕೃತಿ ಸರ್ವನಾಶದ ಅಂಚಿನಲ್ಲಿವೆ. ಪೂಜೆ ಮಾಡುವುದಿರಲಿ ಧರ್ಮವು ಕೊರಳಲ್ಲಿ ಲಿಂಗವನ್ನೇ ಧರಿಸದಿರುವ ಅಸಂಖ್ಯಾತರಿದ್ದಾರೆ. ನಮ್ಮ ಸಮಾಜದ ಭವಿಷ್ಯ ಊಹಿಸಲಸಾಧ್ಯ. ಇದು ಅತ್ಯಂತ ಕಳವಳಕಾರಿ. ಇದೇ ಪರಿಸ್ಥಿತಿ ಮುಂದುವರಿಯಬಿಟ್ಟಲ್ಲಿ ಲಿಂಗಾಯತ ಧರ್ಮವು ಹೇಳಹೆಸರಿಲ್ಲದಂತಾಗುತ್ತದೆ.

ಧರ್ಮಾಭಿಮಾನಿಗಳೇ, ನಮ್ಮ ಧರ್ಮ ಉಳಿಯಬೇಕಾದರೆ ಬಸವ ತತ್ವ ಪ್ರಸಾರವೇ ಪರಿಹಾರ. ಬಸವ ಧರ್ಮ ತತ್ವದಂತೆ ತರಬೇತಿಗೊಳಿಸಿ, ಹೆಚ್ಚಿನ ಧರ್ಮಪ್ರಚಾರಕ ಜಂಗಮರನ್ನು ನೇಮಿಸಿ, ವೈದಿಕ ಆಚರಣೆಗಳನ್ನು ಹೊರಹಾಕಿ, ಗುರು ಬಸವಣ್ಣನವರು ವಚನಗಳ ಮೂಲಕ ಹೇಳಿರುವ ಲಿಂಗಾಯತ ತತ್ವಗಳನ್ನು ಬೋಧಿಸುವುದೇ ಧಾರ್ಮಿಕ ಸುಧಾರಣೆ. ಬಸವ ತತ್ವಗಳಿಗೆ ವಿರುದ್ಧವಾದ ಆಚರಣೆಗಳನ್ನು ರಚನಾತ್ಮಕವಾಗಿ ಪ್ರಶ್ನಿಸಿ, ಅಷ್ಟಾವರಣ, ಪಂಚಾಚಾರ, ಷಟಸ್ಥಲ, ಷಟಸೂತ್ರಗಳನ್ನು ಜಾರಿಗೊಳಿಸುವುದೇ ಧರ್ಮ ಶುದ್ಧೀಕರಣ. ಒಟ್ಟಿನಲ್ಲಿ ಸಮಾಜ ಬಸವ ಸಂವಿಧಾನದಂತೆ ನಡೆಯುವಂತೆ ಪ್ರಯತ್ನಿಸುವುದೊಂದೇ ದಾರಿ. ಕನಿಷ್ಠ ಪಕ್ಷ ಅನ್ಯ ಆಚರಣೆಗಳನ್ನು ಮಾಡದಿರುವುದು ಇಂದಿನ ಅಗತ್ಯವಾಗಿದೆ. ★★

****

ಉದಾರ ದೇಣಿಗೆಗಾಗಿ ಮನವಿ

ಶರಣ ಬಂಧುಗಳೇ,

ಶರಣ ಭೂಮಿ ಬಸವಕಲ್ಯಾಣದಲ್ಲಿ ರೂಪುಗೊಳ್ಳುತ್ತಿರುವ 108' ಪುತ್ಥಳಿಯ ಕೆಲಸವು ಭರದಿಂದ ಸಾಗಿದೆ. ಒಂದೂವರೆ ಕೋಟಿ ರೂಗಳ ವೆಚ್ಚದ ಅಂದಾಜಿನೊಡನೆ ಪ್ರಾರಂಭವಾದ ಮೂರ್ತಿಯ ವೆಚ್ಚ ಈಗಾಗಲೇ 3 ಕೋಟಿ ದಾಟಿದೆ. ಇದಕ್ಕೆ ಪೋಷಕವಾಗಿ ಕೆಲವು ಖರ್ಚುಗಳು ಬರುತ್ತವೆ. ಕೆಲಸ ಆರಂಭಿಸಿದಾಗ ಇದ್ದ ಸಿಮೆಂಟ್, ಕಬ್ಬಿಣದ ರೇಟು ಮೂರುಪಟ್ಟು ಹೆಚ್ಚಿದೆ. ಮೂರ್ತಿಯ ಆಕಾರ ಸ್ಪಷ್ಟ ರೂಪ ತಾಳುತ್ತಲಿದೆ. ಮೂರ್ತಿಯ ಕೆಲಸದ ಜೊತೆಗೆ ಅದರ ಮುಂಭಾಗದ ಕೆಲಸ, ಏರುವ ಮತ್ತು ಇಳಿಯುವ ಮೆಟ್ಟಿಲುಗಳ ಕೆಲಸ, ಮುಂದಿನ ಐಕ್ಯ ಮಂಟಪದ ಕೆಲಸ, ಜೊತೆ ಜೊತೆಗೆ ಬಸವ ಧ್ಯಾನ ಮಂಟಪ ಗವಿ, ಅಕ್ಕಮಹಾದೇವಿ ಗವಿ- ಇವುಗಳ ಕೆಲಸವೂ ಭರದಿಂದ ಸಾಗಿದೆ. ಹೀಗಾಗಿ ಹಣದ ಆವಶ್ಯಕತೆ ಬಹಳವಾಗಿದೆ.

1. ಶರಣ ಬಂಧುಗಳೇ ಸಾಧ್ಯವಾದಷ್ಟೂ ಕಾಣಿಕೆಯ ರೂಪದಲ್ಲಿ ನಿಮ್ಮ ಉದಾರವಾದ ದೇಣಿಗೆಯನ್ನು ಕೊಡಿರಿ. ಶರಣ ಮೇಳಕ್ಕೆ ಬರುವಾಗ ತನ್ನಿರಿ.

2. ಶರಣ ಮೇಳದ ದೇಣಿಗೆ ಸಂಗ್ರಹವನ್ನು ನಿಷ್ಠೆಯಿಂದ ಮಾಡಿರಿ. ಕಾರಣಾಂತರದಿಂದ ರಸೀತಿ ಪುಸ್ತಕ ಬಂದಿಲ್ಲದಿದ್ದರೆ ಫೋನ್ ಮಾಡಿ ರಸೀತಿ ಪುಸ್ತಕ ತರಿಸಿಕೊಂಡು ನಿಷ್ಠೆಯಿಂದ ಸಂಗ್ರಹಿಸಿರಿ. ಎಲ್ಲರೂ ನಿಷ್ಠೆಯಿಂದ ಜೋಪಾನವಾಗಿ ಖರ್ಚುಮಾಡುವ ಹಂಬಲ ಉಳ್ಳ ಪ್ರಾಮಾಣಿಕರು. ಜೋಪಾನವಾಗಿ, ಮಿತವಾಗಿ ಖರ್ಚುಮಾಡಿ ಉಳಿಯುವ ಹಣವನ್ನು ಕಟ್ಟಡನಿಧಿಗೆ, 108 ಅಡಿ ಮೂರ್ತಿಗಾಗಿ ಬಳಸಿಕೊಳ್ಳಲಾಗುವುದು.

3. ಮೆಟ್ಟಿಲು ಯೋಜನೆ: ಏರಲು 108; ಇಳಿಯಲು 108 ಮೆಟ್ಟಿಲು ಮಾಡಲಾಗುತ್ತಿದೆ. 10 ಅಡಿ ಉದ್ದದ ಮೆಟ್ಟಿಲಿಗೆ ಗ್ರಾನೈಟ್ ಹಾಕಿಸಲಾಗುವುದು. ಒಂದು ಮೆಟ್ಟಿಲಿಗೆ 15 ಸಾವಿರ ರೂ ಖರ್ಚು ಬರುವುದು. ಈ ಮೊತ್ತ ಕೊಟ್ಟ ದಾನಿಗಳ ಹೆಸರನ್ನು ಮೆಟ್ಟಿಲಿನ (ನಿಲ್ಲಿಸಿದ ಭಾಗ) ಮೇಲೆ ಕೆತ್ತಿಸಲಾಗುವುದು.


4. ಬಸವ ಧ್ಯಾನಮಂಟಪದ ಗವಿಯೊಳಗೆ ಪುನಃ ಒಳಗವಿಗಳನ್ನು ಮಾಡಲಾಗಿದ್ದು ಅಲ್ಲಿ ಪ್ರಮುಖ ಶರಣರ ಮೂರ್ತಿಗಳನ್ನು ಇರಿಸಲಾಗಿದೆ. ಈ ಒಳಗವಿಗಳಿಗೆ ಗ್ರಾನೈಟ್ ಕಲ್ಲಿನ ಬಾಗಿಲ ವಾಡವನ್ನು ಕೂರಿಸಲಾಗುತ್ತಿದೆ. ಕಲ್ಲಿನ ಬಾಗಿಲುವಾಡ ಒಂದಕ್ಕೆ 25000 (ಇಪ್ಪತ್ತೈದು ಸಾವಿರ) ರೂ ವೆಚ್ಚತಗುಲಿದೆ. 25000 ಕೊಟ್ಟವರ ಹೆಸರನ್ನು ಬಾಗಿಲುವಾಡದ ಮೇಲೆ ಕೆತ್ತಿಸಲಾಗುವುದು.


5. ವಿಶ್ವಕಲ್ಯಾಣ ಮಿಷನ್, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಬೆಂಗಳೂರು, ಧಾರವಾಡ, ಕೂಡಲ ಸಂಗಮ, ಬಸವ ಕಲ್ಯಾಣ, ಬೀದರ - ಈ 5 ಸ್ಥಳಗಳಲ್ಲಿ ಅನಾಥಾಲಯಗಳು, ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಅನಾಥಾಲಯ, ವೃದ್ಧಾಶ್ರಮ ನಡೆಸಲಾಗುತ್ತಿದೆ. ಮಾನವೀಯ ದೃಷ್ಟಿಯಿಂದ ಆರ್ಥಿಕ ಸಹಾಯ ಮಾಡಲು ಅವಕಾಶ ಉಂಟು.

6. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟಿಗೆ 80 ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಇದೆ. ಅಗತ್ಯವಿರುವವರು ಉಪಯೋಗಿಸಿಕೊಳ್ಳಬಹುದು.

ತಮ್ಮ ತಮ್ಮ ಶಕ್ತ್ಯಾನುಸಾರ ಬಸವ ಧರ್ಮ ಪೀಠದ ಕಾರ್ಯಗಳಿಗೆ, ಕಟ್ಟಡ ನಿರ್ಮಾಣಕ್ಕೆ ಕಾಣಿಕೆಯನ್ನು ಸಲ್ಲಿಸಲು ಮನಸ್ಸು ಮಾಡಬೇಕೆಂದು ಶರಣ ಬಂಧುಗಳಲ್ಲಿ ವಿನಂತಿ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ





Kalyana Kirana kannada Monthly October 2010 RNI No.19988/70, CPMG/KA/BGW-50Without Pre Payment (W)-17,